# 9

# ವಾಸಿಮಾಡಿದ ಒಂದು ಪ್ರಕರಣ

## (3:1-11)

ಪಂಚಾಷತ್ತಮ ದಿನವು ಆಗಿಹೋಗಿ ಎಷ್ಟು ದಿನಗಳು ದಾಟಿಹೋಗಿದೆ ಎಂಬುದನ್ನು ನಾವು ಅರಿಯೆವು. ಲೂಕನು ಎರಡೆಯ ಅಧ್ಯಾಯದ ಕೊನೆಯಲ್ಲಿ ಕೊಡಮಾಡಿದ ಆದಿ ಸಭೆಯ ಚಟುವಟಿಕೆಯ ಸಾರಾಂಶವು ದಿನಗಳನ್ನೂ ವಾರಗಳನ್ನೂ ತಿಂಗಳುಗಳನ್ನೂ ಕೂಡಾ ಒಳಗೊಂಡಿದ್ದಾಗಿದೆ. ಈ ಕಥೆಯು ಆಕರ್ಷಣೀಯವಾದ ವಾಸಿಮಾಡುವಿಕೆಯ ಘಟನೆಯ ವಿವರಣೆಗಳಿಂದ ಆರಂಭವಾಗುತ್ತದೆ. ಅಪೊಸ್ತಲರ ಕೃತ್ಯಗಳು 2ರಲ್ಲಿ ಲೂಕನು "ಅನೇಕ ಅಧ್ಭುತ ಕಾರ್ಯಗಳೂ ಸೂಚಕಕಾರ್ಯಗಳೂ ಅಪೊಸ್ತಲರ ಕೈಯಿಂದ ನಡೆದವು" (ವಚನ 43) ಎಂದು ಸೂಚಿಸುವವನಾಗಿದ್ದಾನೆ. ಈ ಅದ್ಭುತಗಳಲ್ಲಿ ಒಂದರ ವಿವರಣೆಯನ್ನು ಅಪೊಸ್ತಲರ ಕೃತ್ಯಗಳು 3ನೇ ಅಧ್ಯಾಯವು ಕೊಡುತ್ತದೆ - ಇದರ ನಕಾರಾತ್ಮಕ ಪರಿಣಾಮವು ಯೆಹೂದಿ ನಾಯಕರ ಮೇಲಾಯಿತು ಎಂದು ಸ್ಪಷ್ಟವಾಗಿ ದಾಖಾಲಾಗಿದೆ. ಇದರಿಂದ "ಕ್ರೈಸ್ತರು ಜನ ರೆಲ್ಲರ ದಯವನ್ನು ಹೊಂದಿದವರಾಗಿದ್ದರು" (ವಚನ 2:47) ಎಂದು ಸೂಚಿಸುವುದಾಗಿದೆ. ಇಲ್ಲಿ ಸ್ಥಿತಿಯ ಬದಲಾಣೆಯಾಯಿತು. ಯೋಹಾನ 15:20ರಲ್ಲಿ ಯೇಸುವಿನಿಂದ ಮುನ್ನುಡಿಯಲ್ಪಟ್ಟ ಚಿತ್ರಹಿಂಸೆಯು ಆರಂಭವಾಯಿತು.

### ಸಹಾಯಕರು (3:1)

ಅಧ್ಯಾಯ ಮೂರರಲ್ಲಿ "ಪೇತ್ರ ಯೋಹಾನರು ಮಧ್ಯಾಹ್ನದ ಮೇಲೆ [3:00 p.m.] ನಡೆಯತಕ್ಕ ಪ್ರಾರ್ಥನೆಗೆ ದೇವಾಲಯಕ್ಕೆ ಹೋಗುತ್ತಿರಲು" (ವಚನ 1) ಎಂದು ಆರಂಭವಾಗುತ್ತದೆ. ಪೇತ್ರ ಯೋಹಾನರು ಮೀನು ಹಿಡಿಯುವುದರಿಂದಲೂ ಭಾಗಿದಾರರು (ಲೂಕ 5:10), ಹಾಗೂ ಯೇಸುವಿನ ಹಿಂಬಾಲಕರೂ ಮತ್ತು ಕೊನೆಯಲ್ಲಿ ಯೇಸುವಿನ ಆತ್ಮೀಯ ಶಿಷ್ಯಮಂಡಳಿಯಲ್ಲಿ ಭಾಗಿದಾರರೂ ಆಗಿದ್ದಾರೆ (ಮತ್ತಾಯ 17:1). ಅವರು ಪಸ್ಕದ ಊಟವನ್ನು ಸಿದ್ಧಪಡಿಸಲು ಜೊತೆಯಾಗಿ ಕೆಲಸಮಾಡಿದರು (ಲೂಕ 22:8); ಅವರು ಖಾಲಿಯಾದ ಸಮಾಧಿಯನ್ನು ನೋಡಲು ಜೊತೆಯಾಗಿಯಾಗಿಯೇ ಓಡಿಹೋದರು (ಯೋಹಾನ 20:3, 4). ಈಗ ಈ ಇಬ್ಬರೂ ಸ್ನೇಹಿತರು ಜೊತೆಯಾಗಿ ದೇವಾಲಯಕ್ಕೆ ಹೋಗುತ್ತಿದ್ದರು.

ಅನೇಕ ವಿಶ್ಲೇಷಣಕಾರರು ಪೇತ್ರ ಮತ್ತು ಯೋಹಾನರು "ಪ್ರಾರ್ಥನೆಗಾಗಿ" ಹೋದರು ಎಂದರೆ ಅವರು ಪ್ರಾರ್ಥನೆಯ ನಿರ್ಧಿಷ್ಟ ಉದ್ದೇಶಕ್ಕಾಗಿ ದೇವಾಲಯಕ್ಕೆ ಹೋಗುತ್ತಿದ್ದರು ಎಂದು ಅವರು ಊಹಿಸುತ್ತಾರೆ. ಬಹುಶಃ ಹೇಗೋ ಈ ನಿರ್ಧಾರಕ್ಕೆ ಬರಲು ಯಾವ ವಾಕ್ಯಭಾಗವೂ ಸಮ್ಮತಿಸುವುದಿಲ್ಲ[1] ಇತರ ಕ್ರೈಸ್ತರು ಪ್ರತಿ ದಿನವೂ ದೇವಾಲಯದಲ್ಲಿ ಅನ್ಯರ ಅಂಗಳದಲ್ಲಿ (2:46). ಭೇಟಿಯಾಗುತ್ತಿದ್ದರು (5:12) - ಯಾಕೆಂದರೆ (1) ಅನೇಕ ಜನರು ಕೂಡಿಬರಲು ಇದೊಂದೇ ಪಟ್ಟಣದಲ್ಲಿ ಇರುವ ಸಾಕಷ್ಟು ದೊಡ್ಡದಾದ ಸ್ಥಳವಾಗಿತ್ತು.[2] ಮತ್ತು (2) ಅದು ಯೇಸುವಿನ ಬಗೆಗೆ ಕೇಳಲು ಬಯಸುವ ಜನರು ಕೂಡಿಬರುವ ಸ್ಥಳವಾಗಿತ್ತು. ಪೇತ್ರ ಯೋಹಾನರು ಯಾಕೆ ಈ ಸಂದರ್ಭದಲ್ಲಿ ಅಲ್ಲಿ ಹೋದರು ಎಂಬುದನ್ನು ನಿರ್ಧರಿಸಬೇಕಾದರೆ ಅವರು ಅಲ್ಲಿ ಹೋದಾಗ ಏನು ಮಾಡಿದರು ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಬೇಕು. ಅವರು ಒಬ್ಬ ಮನುಷ್ಯನನ್ನು ವಾಸಿಮಾಡಿದರು. ಇದು ಯೇಸುವಿನ ಬಗೆಗೆ ಬೋಧಿಸುವ ಸುಸಂದರ್ಭವನ್ನು ಒದಗಿಸಿಕೊಟ್ಟಿತು. ಪೇತ್ರ ಯೊಹಾನರು ದೇವಾಲಯಕ್ಕೆ ಹೋಗುವ ಮೂಲ ಉದ್ದೇಶವೆಂದರೆ ಬಹುಶಃ ಯೇಸು ಕ್ರಿಸ್ತನ ಬಗೆಗೆ ಜನರಿಗೆ ಹೇಳುವುದೇ

ಆಗಿತ್ತು (ನೋಡಿರಿ 5:20, 21).

ಇದು ಒಂದು ವೇಳೆ ಅವರ ಮೂಲ ಉದ್ದೇಶವಾಗಿದ್ದರೆ ಯಾಕೆ ಅವರು "ಮಧ್ಯಾಹ್ನ 3:00 ಘಂಟೆಯಲ್ಲಿ ಪ್ರಾರ್ಥಿಸಲೆಂದು ಹೋದರು"? ಅವರು ಆ ಸಮಯವನ್ನಾರಿಸಿಕೊಂಡಿದ್ದು ಯಾಕೆಂದರೆ ಜನರ ದೊಡ್ಡ ಗುಂಪು ಆ ಸಮಯದಲ್ಲಿ ದೇವಾಲಯದಲ್ಲಿ ಇರುತ್ತಿತ್ತು ಎಂದು ಅವರು ಅರಿತಿದ್ದರು. ಯೆಹೂದಿಗಳು ದಿನಕ್ಕೆ ಮೂರಾವರ್ತಿ ಸ್ತ್ರೀಯರ ಅಂಗಳದಲ್ಲಿ[3] ಪ್ರಾರ್ಥನೆಗಾಗಿ[4] ಸೇರಿಬರುತ್ತಿದ್ದರು. ಆ ಮೂರು ಕಾಲಾವಧಿಗಳಲ್ಲಿ 3:00 ಘಂಟೆಯ ಪ್ರಾರ್ಥನಾ ಸಮಯವೂ ಒಂದಾಗಿತ್ತು.

## ಅಸಹಾಯಕತೆ (3:2)

ಪೇತ್ರ ಯೋಹಾನರು ದೇವಾಲಯಕ್ಕೆ ಹೋದಾಗ, ಕೆಲವೊಬ್ಬರು ಆಗಲೇ ಅಲ್ಲಿದ್ದರು, ಅವರು ದೇವಾಲಯದ ಸಂಕೀರ್ಣದಲ್ಲಿ ಪ್ರತಿದಿನವೂ ಪ್ರತಿಮಿಷವೂ ಕಳೆಯುವಂತವ ರಾಗಿದ್ದರು. ಅವರು ಆರಾಧನೆಗೆ ಬರುವವರಾಗಿರಲಿಲ್ಲ. ಆದರೆ ಬದುಕುಳಿಯುವುದಕ್ಕಾಗಿ ಬರುವವರಾಗಿದ್ದರು.

> ಹುಟ್ಟುಕುಂಟನಾಗಿದ್ದ ಒಬ್ಬ ಮನುಷ್ಯನನ್ನು ಯಾರೋ ಹೊತ್ತುಕೊಂಡು ಬಂದರು. ದೇವಾಲಯದೊಳಕ್ಕೆ ಹೋಗುವವರಿಂದ ಭಿಕ್ಷೆಬೇಡುವುದಕ್ಕಾಗಿ[5] ಅವನನ್ನು ದೇವಾಲ ಯದ[6] ಸುಂದರದ್ವಾರವೆಂಬ ಬಾಗಿಲಿನಲ್ಲಿ ದಿನಾಲು ಕೂರಿಸುತ್ತಿದ್ದರು (ವಚನ 2).

"ದೇವಾಲಯ"ಎಂಬ ಪದವು ಸಂಪೂರ್ಣ ಕಟ್ಟಡದ ಎಲ್ಲವನ್ನೋ ಅಥವಾ ಒಂದು ಭಾಗವನ್ನೋ ಸೂಚಿಸುವುದಕ್ಕೆ ಬಳಸಲ್ಪಟ್ಟಿದೆ, ಆದ್ದರಿಂದ ಆ ಮನುಷ್ಯನನ್ನು ಎಲ್ಲಿ ಇರಿಸಿದ್ದರು ಎಂಬುದರ ಬಗೆಗೆ ನಮಗೆ ಖಚಿತವಾಗಿ ತಿಳಿಯದು. ಸರಿಯಾಗಿ ಹೇಳಬೇಕೆಂದರೆ, ಪವಿತ್ರ ಕಟ್ಟಡವು ಪರಿಶುದ್ಧ ಸ್ಥಳ ಮತ್ತು ಅತಿಪರಿಶುದ್ಧಸ್ಥಳವನ್ನು ಒಳಗೊಂಡಿರುವ ಸಂಕೀರ್ಣದ ಮಧ್ಯದಲ್ಲಿರುವ ಸ್ಥಳವೇ ದೇವಾಲಯವಾಗಿತ್ತು. ಸಾಮಾನ್ಯವಾಗಿ ದೇವಾಲಯದ ಕ್ಷೇತ್ರದ ಸಂಪೂರ್ಣ ಪವಿತ್ರ ಭಾಗವು ಸ್ತ್ರೀಯರ ಅಂಗಳವನ್ನೂ ಒಳಗೊಂಡಿದ್ದು ಇದು ದೇವಾಲಯ ಎಂದು ಸೂಚಿತವಾಗಿತ್ತು. ಈ ವಿಚಾರವನ್ನು ಮುಂದುವರೆಸಿ ದೇವಾಲಯದ ಸಂಪೂರ್ಣ ರಚನೆಯು ಅನ್ಯರ ಅಂಗಳವನ್ನೂ ಒಳಗೊಂಡಿತ್ತು ಎಂಬುದು ಅಸಹಜವಾದ ಮಾತು ಎನ್ನಿಸದು. ಬಹುಶಃ ಪರಿಶುದ್ಧವೆನ್ನಿಸದ ಸ್ಥಳ ಎಂದು ಇಲ್ಲಿ ಸೂಚಿತವಾಗಿರಲಿಕ್ಕೂ ಸಾಕು. ಹಾಗೂ ಭಿಕ್ಷುಕನನ್ನು ಸ್ತ್ರೀಯರ ಅಂಗಳ ಪ್ರವೇಶದ್ವಾರದಲ್ಲಿ ಇರಿಸಲಾಯಿತು. ಜನರು ಪ್ರಾರ್ಥನೆಗಾಗಿ[7] ಕೂಡಿಬರುತ್ತಿದ್ದ ಸ್ಥಳ ಇದಾಗಿತ್ತು. ಇದು "ಸುಂದರದ್ವಾರ" ಎಂದು ಕರೆಯ ಲ್ಪಡುವ ಬಾಗಿಲಾಗಿತ್ತು.

ಪ್ರಾಚೀನ ವಿದ್ವಾಂಸರ ಪ್ರಕಾರ ದೇವಾಲಯದ ಪವಿತ್ರಭಾಗಕ್ಕೆ 9 ಬಾಗಿಲುಗಳಿದ್ದವು. ಅವುಗಳಲ್ಲಿ ಎಂಟು ಬಾಗಿಲುಗಳು 45 ಅಡಿ ಎತ್ತರವಿದ್ದವು; ಒಂದು ಬಾಗಿಲವು ಸ್ತ್ರೀಯರ ಅಂಗಳದ ಮುಖ್ಯಪ್ರವೇಶದ್ವಾರವಾಗಿದ್ದು ಇದು 75 ಅಡಿ ಎತ್ತರವಿತ್ತು. ಈ ಬಾಗಿಲು ಪ್ರಾಚೀನ ಬರಹಗಾರರಿಂದ "ನಿಕನೋರ್" ಬಾಗಿಲು ಎಂದು ಕರೆಯಲ್ಪಡುತ್ತಿತ್ತು. ಕೊರಿಂಥಿಯನ್ನರ ಕಂಚಿನಿಂದ ಇದು ಮಾಡಲ್ಪಟ್ಟಿದ್ದು ಇದು ಸುಂದರವಾದ ಕರಕುಶಲತೆಯೆಂದು ಹೇಳಲ್ಪಟ್ಟ ಇದು ಬೆಲೆಗಳಲ್ಲಿ ಅತಿ ಮಿತಿಮೀರಿದ್ದಾಗಿದೆ ಎಂದು ಹೇಳಲಾಗುತ್ತದೆ. "ಈ ಬಾಗಿಲುಗಳು ಬೆಳ್ಳಿ ಮತ್ತು ಬಂಗಾರದ[8] ತಗಡುಗಳಿಂದ ಮಾಡಲ್ಪಟ್ಟಿತ್ತು." ಈ ಬಾಗಿಲು ಪೂರ್ವಕ್ಕೆ ಮುಖಮಾಡಿದ್ದರಿಂದ ದಿನದ ಬೆಳಗ್ಗೆ ಸೂರ್ಯನ ಕಿರಣಗಳು ಕಂಚಿನ ಮೇಲೆ ಪ್ರತಿಫಲಿಸಿದಾಗ ಅದರ ವೈಭವ ಪ್ರಜ್ವಲಿಸುವ ಬೆಂಕಿಯ ಚೆಂಡಿನಂತೆ ಕಾಣುತ್ತಿತ್ತು. ಅಂತೆಯೇ ಅನೇಕ ಪಂಡಿತರು ಈ ಬಾಗಿಲನ್ನು "ಸುಂದರವಾದುದು" ಎಂದು ಕರೆಯುತ್ತಿದ್ದರು ಎಂದು ನಂಬುತ್ತಾರೆ.

ಈ ದ್ವಾರದ ಹತ್ತಿರ "ಹುಟ್ಟುಕುಂಟನಾದ" ಮನುಷ್ಯನು ಇದ್ದನು. ಈ ಮನುಷ್ಯನು

ಹುಟ್ಟುವಾಗ ಆತನ ಪಾದಗಳು ಮತ್ತು ಹರಡುಗಳು ಚೆನ್ನಾಗಿ ಬೆಳದಿರಲಿಲ್ಲ.[9] ಆತನು ಎದ್ದು ನಿಲ್ಲುತ್ತಿರಲಿಲ್ಲ, ಸ್ವಲ್ಪವಾಗಿ ನಡೆಯುತ್ತಿದ್ದನು. ಈ ದಿನಗಳಲ್ಲಿ ನಾವು ಹೊಂದಿರುವ ವೈದ್ಯಕೀಯ ಸೌಲಭ್ಯಗಳು ಅಂದಿನ ದಿನಗಳಲ್ಲಿ ಇರಲಿಲ್ಲ. ಒಂದು ವೇಳೆ ಒಬ್ಬರು ಕುಂಟನಾಗಿ ಹುಟ್ಟಿದ್ದಾದರೆ, ಕುಂಟನಾಗಿಯೇ ಇರುತ್ತಿದ್ದನು. ಮುಂದೆ ಆತನು ನಡೆಯದೆ ಹೋದರೆ ಆತನಿಗೆ ಕೆಲಸ ಮಾಡಲಾಗುತ್ತಿರಲಿಲ್ಲ. ಕೆಲಸಕ್ಕೆ ಬಾರದ ವ್ಯಕ್ತಿಯಾಗಿ ಒಂದೆಡೆ ಬಿದ್ದುಕೊಂಡಿರಬೇಕಿತ್ತು.[10]

ಈ ಕಥೆಯನ್ನು ವಿಮರ್ಷಿಸಲು, ಈ ಮನುಷ್ಯನನ್ನು ನಿಮ್ಮ ಮನಸ್ಸಿನಲ್ಲಿ ನೋಡುವದು ಅವಶ್ಯವಿದೆ. "ಆತನು ನಾಲ್ವತ್ತು ವರ್ಷಕ್ಕಿಂತ ಹೆಚ್ಚಿನವನಾಗಿದ್ದನು" (4:22); ಆತನು ಬಹುಶಃ ಐವತ್ತು ಅಥವಾ ಅರವತ್ತುರ ವರ್ಷದವನಂತೆ ಕಾಣುತ್ತಿದ್ದನು. ಆ ಮುನುಷ್ಯನ *ಕಾಲುಗಳನ್ನು* ನೋಡಿರಿ. ತನ್ನ ನಾಲ್ವತ್ತನೆಯ ವಯಸ್ಸಿನವರೆಗೂ ಆತನು ಎಂದಿಗೂ ಉಪಯೋಗಿಸಿರಲಿಲ್ಲ. ಮಾಂಸಖಂಡಗಳು ಬೆಳದಿರಲಿಲ್ಲ; ಕಾಲುಗಳಲ್ಲಿ ತುಸು ಹೆಚ್ಚೆನಿಸುವ ನೆರಿಗೆಗಟ್ಟಿದ ಚರ್ಮವು, ಚೂರಾದ ಎಲವುಗಳನ್ನು ಮುಚ್ಚಿತ್ತು. ಭಿಕ್ಷುಕರು ಅಂದು ಇಂದು ಎಂದಿಗೂ ತಮ್ಮ ವಿರೂಪವನ್ನು ಪ್ರಕಟಿಸಿ ಕರುಣೆಯನ್ನು ಸೆಳೆದುಕೊಳ್ಳುವವರಾಗಿದ್ದಾರೆ. ಈ ಮನುಷ್ಯನು ಸಹ ದಾರಿ ಹೋಕರಿಗೆ ತನ್ನ ಮುದುರಿದ ಕಾಲುಗಳನ್ನು ಕಾಣಿಸುವಂತೆ ಬಟ್ಟೆಗಳನ್ನು ತೊಟ್ಟಿರಬಹುದು.

ಪೇತ್ರ ಯೋಹಾನರು ಈ ನಿರ್ಧಿಷ್ಟ ಮನುಷ್ಯನನ್ನು ಆ ನಿರ್ಧಿಷ್ಟ ದಿನದಂದು ವಾಸಿಮಾಡಿದ್ದು ಕಾಕತಾಳೀಯವೇನಲ್ಲ. ವಾಸಿಮಾಡುವಿಕೆಯು ಅಪೊಸ್ತಲರ ಭಾಗದ ಭಾವನಾತ್ಮಕತೆಯ ಕರುಣೆಯ ಭಾಗವಾಗಿರಲಿಲ್ಲ. ಪೇತ್ರ ಮತ್ತು ಯೋಹಾನರು ನೂರಾರು ಸಾರಿ ಈ ಮನುಷ್ಯನ ಮುಂದೆ ಹಾದುಹೋಗಿರಬಹುದು. ಅವರು ಅನೇಕ ಇತರ ಸಂದರ್ಭಗಳಲ್ಲಿ ಆತನನ್ನು ವಾಸಿಮಾಡಬಹುದಿತ್ತು. ಅವರು ಒಬ್ಬ ನಿರ್ಧಿಷ್ಟ ಬಿಕ್ಷುಕನನ್ನು ವಾಸಿಮಾಡಿದರು (ಆ ಪ್ರದೇಶವು ಭಿಕ್ಷುಕರಿಂದ ತುಂಬಿತ್ತು) ಒಂದು ನಿರ್ಧಿಷ್ಟ ಸಂದರ್ಭದಲ್ಲಿ ಕೆಲಕಾರಣಗಳ ನಿಮಿತ್ತವಾಗಿ ವಾಸಿಮಾಡಿದರು: (1) ಆತನು ಬಹುದಿನಗಳಿಂದ ಅಲ್ಲಿದ್ದನು ಅಲ್ಲಿನ ಪ್ರತಿಯೊಬ್ಬರೂ ಆತನನ್ನು ತಿಳಿದಿದ್ದರು (3:10, 16). (2) ಆತನ ಸಂಕಟಗಳ ರೀತಿ ಹೇಗಿತ್ತೆಂದರೆ ಆತನು ವಾಸಿಯಾದಾಗ ಅಲ್ಲಿ ನಿಜವಾದ ಅಧ್ಭುತವು ನಡೆಯಿತೆಂಬುದಕ್ಕೆ ಯಾವ ಪ್ರಶ್ನೆಯೂ ಉದ್ಭವಿಸುವುದಿಲ್ಲ (4:16). (3) ಅವರಿಗೆ ಜನರನ್ನು ತ್ವರಿತವಾಗಿ ಕೂಡಿಸಲು ಮತ್ತು ಯೇಸುವೇ ಕ್ರಿಸ್ತನು[11] ಎಂದು ಮನದಟ್ಟು ಮಾಡಿಕೊಡಲು ಈ ಮಾರ್ಗಬಿಟ್ಟು ಬೇರೆ ಮಾರ್ಗವಿರಲಿಲ್ಲ.

ಈ ಭಿಕ್ಷುಕನಿಗೆ ಇಂಥ ದಿನವೂ ಕೂಡ ಬೇರೆ ಸಾವಿರ ದಿನಗಳಂತೆಯೇ ಪ್ರಾರಂಭವಾಯಿತು ಎಂಬುದರಲ್ಲಿ ಸಂಶಯವಿಲ್ಲ. ಆತನ ದಿನಗಳನ್ನು ಪುನರಚಿಸುವದು ಕಷ್ಟದಾಯಕವೇನಲ್ಲ. ಆತನು ಬೇಗನೇ[12] ಎದ್ದನು, ಮತ್ತು ತನ್ನ ಹಳೆಯ, ಹೊಲಸಾದ, ನಾರುವ, ಹರಕು ಬಟ್ಟೆಗಳನ್ನು ಹಾಕಿಕೊಂಡನು - ಹಸಿವೆಯನ್ನು ಹತ್ತಿಕ್ಕುವ ಪ್ರಯತ್ನವದು. ಆತನ ಹೊಟ್ಟೆಯಲ್ಲಿ ಎದ್ದ ತೀವ್ರ ಯಾತನೆಯನ್ನು[13] ಅಲಕ್ಷಿಸಲು ಯತ್ನಿಸಿದನು. ಖಾಲಿಯಾದ ಹಣದ ಚೀಲ ಮತ್ತು ಮುದುಡಿದ ರೊಟ್ಟಿಯು ಆತನ ಒಳಂಗಿಯ ಒಳಗಿದ್ದವು. ಕೊಳೆಯಾದ ನೆಲದಿಂದ ಹಿಡಿತುಂಬ ಧೂಳನ್ನು ತೆಗೆದುಕೊಂಡು ತನ್ನ ಮುಖಕ್ಕೆ ಕಾಲಿಗೆ ಮತ್ತು ಕೈಗಳ ಹಿಂದೆ ಒರೆಸಿಕೊಂಡನು. ಆತನು[14] ಇದನ್ನೆಲ್ಲವನ್ನು ಮಾಡುತ್ತಿರುವಾಗಲೆ ಆತನನ್ನು ದೇವಾಲಯಕ್ಕೆ[15] ಹೊತ್ತೊಯ್ಯಲು ಜನರು ಬಂದರು. ಅವರು ಅವನನ್ನು ಇಕ್ಕಟ್ಟಾದ ಓಣಿಯೊಳಗೆ ತಳ್ಳಿಕೊಂಡು ಜನರಿಂದ ತುಂಬಿದ ಅನ್ಯರ ಜನರ ಅಂಗಳಕ್ಕೆ ಎಸೆದರು ಮತ್ತು ಹೋದರು. ಆತನು ತನ್ನ ವಿಕಾರಾತ್ಮಕ ಕಾಲನ್ನು ಎಷ್ಟುಸಾಧ್ಯವೋ ಅಷ್ಟು ಪ್ರದರ್ಶನ ಮಾಡಿದನು. ತನ್ನ ಮುಖದ ಮೇಲೆ ಕರುಣಾಭರಿತ ನೋಟವನ್ನು ಇರಿಸಿಕೊಂಡನು. ಹೊಲಸಾದ ಕೈಗಳನ್ನು ಚಾಚಿದನು ಮತ್ತು "ಬಡವರಿಗೆ ದಾನಮಾಡಿರಿ ಬಡವರಿಗೆ ದಾನ ಮಾಡಿರಿ" ಎಂದು ಕೂಗಲಾರಂಭಿಸಿದನು. ಇದೊಂದು ನಿರಾಶಾಯುಕ್ತ ಮಸುಕಾದ ಇನ್ನೊಂದು ದಿನವಾಗಿತ್ತು. ಇದು ಇತರೆ ದಿನಗಳಿಗಿಂತ ಭಿನ್ನವಾದುದು - ಅವನು ತಾನು ಯೇಸುವಿನ ಯೋಜನೆ ಉದ್ದೇಶದ ಭಾಗವಾಗುತ್ತೇನೆ ಎಂದು ಆತನು ನೆನಿಸಿರಲಿಲ್ಲ.

## ಆಶಾದಾಯಕವಾದುದು (3:3-6ಎ)

ಅದೊಂದು ಸಂಜೆಯ ಯಜ್ಞದ ಅರ್ಪಣೆಯ ಸಮಯವಾಗಿತ್ತು. ಭಿಕ್ಷುಕರ ಒಳಂಗಿಯ ಕುಂದಿದ ಹಣದ ಚೀಲದಲ್ಲಿರುವ ಹಣವು ಇನ್ನೂ ಹಗುರಾಗಿತ್ತು.[16] ಅಲ್ಲಿ ಪ್ರಾರ್ಥನೆಗೆ ಬಂದವರು ಒಂದು ವೇಳೆ ಉದಾರಿಗಳಾಗಿರದೆ ಹೋಗಿದ್ದರೆ ಭಿಕ್ಷುಕನಿಗೆ ಇದು ಇನ್ನೊಂದು ಅತಿಯಾದ ಹಸಿವೆಯಿಂದು ಕೂಡಿದ ನಿದ್ರಾರಹಿತ ರಾತ್ರಿಯಾಗಬಹುದಿತ್ತು.[17] ಆಗ ಅಲ್ಲಿ ಪರಿಚಿತರಂತೆ ಕಾಣುವ ಇಬ್ಬರು ಮನುಷ್ಯರು ಅಲ್ಲಿಗೆ ಬಂದರು. ಅವರು ದೇವಾಲಯಕ್ಕೆ ಹೋಗುತ್ತಿರುವದನ್ನು ಕಂಡ ಇವನು “ಪೇತ್ರ ಯೋಹಾನರನ್ನು ಭಿಕ್ಷಾ ಕೊಡಬೇಕು (3:3) ಎಂದು ಕೇಳಲು” ಆಗ ಅಸಾಮಾನ್ಯವಾದ ಸಂಗತಿಯು ಘಟಿಸಿತು. ಪೇತ್ರ ಯೋಹಾನರಿಬ್ಬರು ಅವನನ್ನು ದೃಷ್ಟಿಸಿ ನೋಡಿದರು. ಆಗ ಪೇತ್ರನು - ಅವನಿಗೆ “ನಮ್ಮನ್ನು ನೊಡು!” (ವಚನ 4) ಅಂದನು. ಸಾಮಾನ್ಯವಾಗಿ ಅಲ್ಲಿ ಹಾದುಹೋಗುವವರು ಈ ಮನುಷ್ಯನನ್ನು ನೋಡಿ ರಲಿಲ್ಲ; ಅವರು ಆತನ ಚಲನವಲನಗಳನ್ನು ದೃಷ್ಟಿಸಿರಬಹುದು ಆದರೆ ಅದಷ್ಟೇ ಎಲ್ಲವೂ ಆಗಿತ್ತು. ಆತನಿಗೆ ಭಿಕ್ಷೆಕೊಡುವವರು ಕೂಡಾ ಆತನನ್ನು ದೃಷ್ಟಿಸಿ ನೋಡಿರಲಿಲ್ಲ. ಅವರು ಅಸಡ್ಡೆಯಿಂದ ಚಿಕ್ಕ ನಾಣ್ಯವನ್ನು ತೆಗೆದು ಆತನ ಅಂಗೈಯಲ್ಲಿ ದೂಡುತ್ತಿದ್ದರು ಮತ್ತು ತ್ವರೆ ಯಿಂದ ಸಾಗುತ್ತಿದ್ದರು. ಅಲ್ಲದೇ ಆತನೂ ಸಹ ಅಲ್ಲಿ ಹಾದುಹೋಗುವವರನ್ನು ನೋಡು ತ್ತಿರಲಿಲ್ಲ. ಆತನ ಕಣ್ಣುಗಳು ವಿಶ್ರಾಂತ ಹೀನವಾಗಿದ್ದವು; ಯಾವಾಗಲೂ ಹೆಚ್ಚಿನ ರೀತಿಯಲ್ಲಿ ಸಹಾಯಮಾಡುವವರನ್ನು ಆತನು ಹುಡುಕುತ್ತಿದ್ದನು. ಈ ಇಬ್ಬರು ಮನುಷ್ಯರು ಹೇಗೋ, ಆತನಮುಂದೆ ನಿಂತರು, ಅವನನ್ನು ದೃಷ್ಟಿಸಿ ನೋಡಿದರು, ಹಿರಿಯ ಮನುಷ್ಯನು “ನಮ್ಮನ್ನು ನೋಡು!” ಎಂದು ಹೇಳಿದನು.

“ಅವನು [ಭಿಕ್ಷುಕನು] ಅವರಿಂದ ಏನಾದರು ಸಿಕ್ಕೀತೆಂದು ನಿರೀಕ್ಷಿಸಿ ಅವರನ್ನೇ ಲಕ್ಷವಿಟ್ಟು ನೊಡಿದನು” (ವಚನ 5). ಬಹುಶ ಈ ರಾತ್ರಿ ಊಟವಿಲ್ಲದೇ ಕಳೆಯುವ ಪ್ರಸಂಗವು ಬಾರದೆ ಹೋಗಬಹುದು ಎಂದುಕೊಂಡಿರಬಹುದು. “ಆದರೆ ಪೇತ್ರನು ಅವನಿಗೆ ಬೆಳ್ಳಿ ಬಂಗಾರಗಳು ನನ್ನಲಿಲ್ಲ[18] ಎಂದು ಹೇಳಿದನು” (ವಚನ 6ಎ). ಆಗ ಭಿಕ್ಷುಕನಲ್ಲಿ ನಿರಾಶೆಯು ಹೊರಸಿರಬಹುದು. ಅವರ ಅಸಹಜವಾದ ಚಟುವಟಿಕೆಗಳು ದೊಡ್ಡ ಗಾತ್ರದ ದಾನವನ್ನು ಪಡೆಯುವ ಅವನ ನಿರೀಕ್ಷೆಯನ್ನು ಹೆಚ್ಚಿಸಿದ್ದವು. ಈಗ ಅವರೂ ಆತನಷ್ಟೇ ಬಡವರು ಎಂದು ಆತನಿಗೆ ಹೇಳಲ್ಪಟ್ಟಿತು!

ಕುಂಟನಾದ ಮನುಷ್ಯನು ಹಣವನ್ನು ನಿರೀಕ್ಷಿಸುತ್ತಿದ್ದನೇ ಹೊರತು, ಸ್ವಸ್ಥವಾ ಗು ವಿಕೆಯನ್ನು ಅಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. ಈ ಪರಿಚ್ಛೇದದಲ್ಲಿ ಈ ಸಂದರ್ಭಕ್ಕಿಂತ ಮುಂಚೆ ಈ ಮನುಷ್ಯನಿಗೆ ಯೇಸುವಿನಲ್ಲಿ ನಂಬಿಕೆ ಇರುವುದರ ಬಗೆಗೆ ನನಗೆ ಯಾವ ವಿಚಾರದ ಸುಳುಹು ಕೊಡುಲ್ಪಟ್ಟಿಲ್ಲ. “ಸ್ವಸ್ಥವಾಗುವಿಕೆಯ ಬಗ್ಗೆ ನಂಬಿಕೆಯು” ಅತಿ ಕಡಿಮೆ ಇತ್ತು. ಪೇತ್ರನ ಮುಂದುವರೆದ ಪ್ರಸಂಗಗಳಲ್ಲಿ “ಆತನ ಮೂಲಕ ಉಂಟಾಗಿರುವ ನಂಬಿಕೆಯ ಮೂಲಕ [ಅಂದರೆ ಯೇಸುವಿನ ಹೆಸರಿನಲ್ಲಿ]” ಆ ಮನುಷ್ಯನು ಸ್ವಸ್ಥವಾ ಗಿದ್ದನ್ನು ಆತನು ಗಮನಿಸಿದನು (3:16), ಆದರೆ, ನಾವು ನೋಡುವುದೇನೆಂದರೆ ಅಪೊಸ್ತಲರ ನಂಬಿಕೆಯು ಇಲ್ಲಿ ಉಲ್ಲೇಖವಾಗಿದೆಯೇ ಹೊರತು ಸ್ವಸ್ಥನಾದ ಮನುಷ್ಯನ ನಂಬಿಕೆಯಲ್ಲ. ಮುಂದೆ ಪೌಲನು ಇಂತಹದೇ ಪರಿಸ್ಥಿತಿಯಡಿಯಲ್ಲಿ ಒಬ್ಬ ಮನುಷ್ಯನನ್ನು ಸ್ವಸ್ಥಮಾಡಿದಾಗ ವಾಕ್ಯವು ಹೇಳುವುದೇನೆಂದರೆ ಸ್ವಸ್ಥಹೊಂದಿದವನಿಗೆ ನಂಬಿಕೆ ಇತ್ತು (ಹೋಲಿಸಿ 14:9),[19] ಎಂದು. ಆದರೆ ಅಂತಹ ಹೇಳಿಕೆಗಳು ಅಪೊಸ್ತಲರ ಕೃತ್ಯಗಳು 3ರಲ್ಲಿ ಇಲ್ಲ. ನಾನು ಇದನ್ನು ಯಾಕೆ ಒತ್ತಿ ಹೇಳುತ್ತಿದ್ದೇನೆಂದರೆ “ಸ್ವಸ್ಥಮಾಡುವವರು” ಎಂದು ಹೇಳಿ ಕೊಳ್ಳುವವರು, ಇಂದು ಯಾರನ್ನಾದರು ಸ್ವಸ್ಥಮಾಡದೇ ಹೋದಾಗ ಯಾರಿಗೆ ಸ್ವಸ್ಥತೆಯ ಅವಶ್ಯಕತೆಯು ಇದೆಯೋ ಅವರ ಮೇಲೆ ನಿರಾತಂಕವಾಗಿ ದೋಷವನ್ನು ಹಾಕಿಬಿಡುವರು: “ಆತನಿಗೆ ಸ್ಪಷ್ಟ ವಾದ ನಂಬಿಕೆ ಇಲ್ಲ”[20] ಎಂದು. ಹೊಸ ಒಡಂಬಡಿಕೆಯಲ್ಲಿ ನಂಬಿಕೆಯ

ವರದಾನದ ಜೊತೆ ಅಧ್ಭುತೀಯ ಸಾಮರ್ಥ್ಯಗಳೂ ಕೂಡಾ ಅವಶ್ಯವಾಗಿವೆ (ಮಾರ್ಕ 16:17, 18), ನಂಬಿಕೆಯು, ಅದ್ಭುತ ವರಗಳನ್ನು ಹೊಂದಿರುವನಿಗೆ ಮಾತ್ರ ಅವಶ್ಯವೇ ಹೊರತು ಅದ್ಭುತಗಳನ್ನು ಹೊಂದಲಿರುವವನಿಗೆ ಅಲ್ಲ[21] ಅಫೊಸ್ತಲರ ಕೃತ್ಯಗಳ 3ನೆಯ ಅಧ್ಯಾಯವು ಕುಂಟ ಮನುಷ್ಯನಿಗೆ ನಂಬಿಕೆ ಇತ್ತು ಎಂಬುದರ ಬಗೆಗೆ ಯಾವ ಸೂಚನೆಯನ್ನೂ ನಮಗೆ ಕೊಡುವುದಿಲ್ಲ. ಆತನು ಹಣವನ್ನು ನಿರೀಕ್ಷಿಸುತ್ತಿದ್ದನು ಹೊರತು ಸ್ವಸ್ಥತೆಯನ್ನಲ್ಲ. ಆತನ ನಿರೀಕ್ಷೆಯನ್ನು "ಬೆಳ್ಳಿಬಂಗಾರಗಳು ನನ್ನಲ್ಲಿಲ್ಲ" ಎಂಬ ಪೇತ್ರನ ಹೇಳಿಕೆಯು ನಾಶಮಾಡಿತು.

## ಸ್ವಸ್ಥತೆ (3:6ಬಿ-8ಎ)

ಪೇತ್ರನ ಹಾಗೆ ಹೋಗದೇ "ಆದರೆ ನನ್ನಲ್ಲಿರುವುದನ್ನು ನಿನಗೆ ಕೊಡುತ್ತೇನೆ ..." (ವಚನ 6ಬಿ) ಎಂದನು. ನಾನು ಮತ್ತು ನೀನು ಬೆಳ್ಳಿ ಬಂಗಾರಗಳನ್ನು ಹೊಂದಿರದೆ ಇರಬಹುದು, ಆದರೆ ನಾವು ಯಾವಾಗಲೂ ದೇವರ ಸೇವೆಯಲ್ಲಿ ಉಪಯೋಗವಾಗುವ ಕೆಲವನ್ನಾದರು ಹೊಂದಿರುತ್ತೇವೆ: ಅವು ತಲಾಂತುಗಳು, ಸಮಯ, ಮತ್ತು ಸಾಮರ್ಥ್ಯ. "ನಮಗಿರುವುದನ್ನು" ನಾವು ಬಳಸುವಂತೆ ದೇವರು ನಮ್ಮನ್ನು ಕೇಳುವವನಾಗಿದ್ದಾನೆ. ಈ ವಿಚಾರದಲ್ಲಿ ಪೇತ್ರನು ಬೆಳ್ಳಿಬಂಗಾರಗಳಿಗಿಂತ ಅಮೂಲ್ಯವಾದವುಗಳನ್ನು ಹೊಂದಿದ್ದನು. ಆತನು ಮುಂದುವ ರೆಸುತ್ತಾ "ನಜರೇತಿನ ಯೇಸುಕ್ರಿಸ್ತನ ಹೆಸರಿನಲ್ಲೇ ಎದ್ದು - ನಡೆದಾಡು!" ಎಂದನು. ಸ್ವಸ್ಥತೆಗೆ ನಂಬಂಧಿಸಿದಂತೆ ಯೇಸುಕ್ರಿಸ್ತನ ಹೆಸರನ್ನು ಬಳಸುತ್ತಾ ಇರುವದು ಇದೆ ಮೊದಲಬಾರಿ ದಾಖಲಾಗಿದೆ. ಆದರೆ ಇದೇ ಕೊನೆಯಾಗಲಿಲ್ಲ.[22]

"ಯೇಸು ಕ್ರಿಸ್ತನ ಹೆಸರಿನಲ್ಲಿ" ಎಂಬ ಮಾತು ಅರ್ಥಗರ್ಭಿತ ಮೋಡಿಯ ಅನುಭವ ಮಂತ್ರವಾಗಿ ಅಫೊಸ್ತಲರಿಂದ ಬಳಸಲ್ಪಟ್ಟಿತು ಎಂದು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳ ಬೇಕು.[23] "ಯೇಸುಕ್ರಿಸ್ತನ ಹೆಸರಿನಲ್ಲಿನ" ಸ್ವಸ್ಥತೆಗೆ ಯೇಸು ಕ್ರಿಸ್ತನೇ. ಕಾರಣನು ಎಂಬುದನ್ನು ಇದು ಧೃಢೀಕರಿಸುತ್ತದೆ. ಯೇಸು ಪಾರ್ಶ್ವವಾಯು ರೋಗಿಗೆ "ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗು" (ಮಾರ್ಕ 2:11) ಎಂದು ಹೇಳಿದಾಗ ಪೇತ್ರ ಯೋಹಾನರು ಅಲ್ಲಿ ಉಪಸ್ಥಿತರಿದ್ದರು. ಆ ಮನುಷ್ಯನು ಎದ್ದು ನಿಂತಾಗ ಆತನಲ್ಲಿ ಅಚ್ಚರಿಯ ನೋಟವನ್ನೂ ಆತನು ಹಾಸಿಗೆಯನ್ನು ಸುತ್ತಿದ್ದನು ಹಾಗೂ ಬಾಗಿಲಿನಿಂದ ಹೊರಗೆ ನಡೆದದ್ದನ್ನೂ ಅವರು ನೋಡಿದ್ದರು. ಯೇಸು ಇನ್ನೂ ವಾಸಿಮಾಡುವ ಶಕ್ತಿಯನ್ನು ಹೊಂದಿದ್ದಾನೆ ಎಂಬುದರಲ್ಲಿ ಅವರಿಗೆ ಯಾವ ಸಂಶಯವಿರಲಿಲ್ಲ.

ಈ ಭಿಕ್ಷುಕನು ಖಂಡಿತವಾಗಿ ಯೇಸುವಿನ[24] ಬಗೆಗೆ ಕೇಳಿದ್ದನು. ಆದರೆ ತಾನು ನಡೆಯುವುದಕ್ಕೆ ಸಂಬಂಧಿತವಾಗಿ ಉಪಯೋಗಿಸಿದ ಆತನ ಹೆಸರಿನ ಸೂಚನೆಯ ಬಗೆಗಿನ ವಿವಾದದ ಕುರಿತು ಬಹುಶಃ ಆತನಿಗೆ ಯಾವ ವಿಚಾರವೂ ತಿಳಿದಿರಲಿಲ್ಲ. ಪೇತ್ರನು ತನ್ನನ್ನು ಅಣಕಿಸುತ್ತಿದ್ದಾನೆ ಎಂದೂ ಆತನು ಆಲೋಚಿಸಿರಬಹುದು. ಒಂದು ವೇಳೆ ಆತನು ನಡೆಯಲು ಶಕ್ತನಾದದ್ದೆ ಆದರೆ ಇಪ್ಪತ್ತು ವರ್ಷಗಳ ತನಕ ಹಣವನ್ನು ಬೇಡುವುದಕ್ಕಾಗಿ ಆತನು ಅವಮಾನದಿಂದ ಸಂಕಪಟ್ಟದ್ದು ಯಾಕೆ?

ಆ ಮನುಷ್ಯನಿಗೆ ನಡೆಯಲು ಆಗದೇ ಇದ್ದಾಗ ಪೇತ್ರನು ಆತನನ್ನು ತಲುಪಿದನು. ತನ್ನ ಕೈಗಳನ್ನು ಚಾಚಿದನು. "... ಅವನನ್ನು ಬಲಗೈ ಹಿಡಿದು ನಿಲ್ಲಿಸಿದನು. ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು"[25] (ವಚನ 7). ತದನಂತರದ ವರ್ಷಗಳಲ್ಲಿ ಆತನ ಪಾದಗಳಿಗೆ, ಆತನ ಕಾಲುಗಳಿಗೆ, ಆತನ ಸೊಂಟಕ್ಕೆ ಬಲವು ಹರಡಿದ್ದನ್ನು ಆತನು ನಿಸ್ಸಂಶಯವಾಗಿ ನೆನಪಿಸಿಕೊಳ್ಳುವನು.

ಇನೊಂದಾವರ್ತಿ, ಈ *ಸನ್ನಿವೇಶವನ್ನು* ನಿಮ್ಮ ಕಣ್ಣುಗಳ ಮುಂದೆ ತರಲು ಬಯಸು ತ್ತೇನೆ. ಜ್ಞಾಪಿಸಿಕೊಳ್ಳಿ, ಅಸ್ತವ್ಯಸ್ತವಾದ ಪಾದಗಳು ಮತ್ತು ಹರಡುಗಳು ಆ ತಿರುಚಿದ ತೆಳುವಾದ ಕಾಲುಗಳು? ನಿಮ್ಮ ಕಣ್ಣಮುಂದೆಯೇ! ಅವುಗಳು ಸರಿಪಡಿಸಲ್ಪಡುವುದನ್ನು ನೀವು ಕಾಣುವಿರಿ.

ಈ ಎಲ್ಲ ಸಮಯಗಳಲ್ಲಿ ದೇವರು ಎಲುಬಿನ ಹಂದರವನ್ನು ಕಟ್ಟಿದನು, ಮಾಂಸಖಂಡಗಳನ್ನು ಮತ್ತು ಸ್ನಾಯುಗಳನ್ನು ಬಲಪಡಿಸಿದನು. ಬಿದ್ದುಹೋದ ರಕ್ತನಾಳಗಳನ್ನು ತಿರುಗಿ ಕಟ್ಟಿದನು, ಸತ್ತನರಗಳ ಕೊನೆಯನ್ನು ತಿರುಗಿ ಉಜ್ಜೀವನ ಮಾಡಿದನು, ಮತ್ತು ಹೆಪ್ಪುಗಟ್ಟಿದ ಕೀಲುಗಳನ್ನು ಸಡಿಲುಗೊಳಿಸಿದನು - ಎಲ್ಲವೂ ಒಂದೇ ಕ್ಷಣದಲ್ಲಿ! ಇದು ಪ್ರತಿಯೊಬ್ಬರು ನೋಡಬಹುದಾದ ಅದ್ಭುತಾವಾಗಿತ್ತು. ಇದು ಯಾರೂ ನಿರಾಕರಿಸಲಾರದಂತಹ ಅದ್ಭುತವಾಗಿತ್ತು!

ಈ ಅದ್ಭುತವು ಮಾಂಸ ಮತ್ತು ಎಲುಬುಗಳ ಸ್ವಸ್ಥತೆಗಿಂತಲೂ ಮಿಗಿಲಾಗಿತ್ತು. ಯಾವಾಗ ಭಿಕ್ಷುಕನು ತನ್ನ ದೇಹದ ಮೂಲಕ ಶಕ್ತಿಯ ಹರುಪನ್ನು ಅನುಭವಿಸಿದನೋ, ಆಗ ಆತನು ಹಿಂದೆಂದೂ ಮಾಡದಂತಹ ಕೆಲಸವನ್ನು ಮಾಡಿದನು; "ಅವನು ಪಾದಗಳ ಮೇಲೆ ನೇರ ವಾಗಿ ನಿಂತನು[26] *ನಡೆಯಲು ಆರಂಭಿಸಿದನು*; ಮತ್ತು ಅವರೊಡನೆ ದೇವಾಲಯವನ್ನು ಪ್ರವೇಶಿಸಿದನು ಹಾರುತ್ತಾ ಜಿಗಿಯುತ್ತಾ ದೇವರನ್ನು ಕೊಂಡಾಡಿದನು" (ವಚನ 8; ಒತ್ತಿ ಹೇಳಿದ್ದು ನನ್ನದು). ಈ ಮನುಷ್ಯನ ತತ್‍ಕ್ಷಣದ ನಡೆಯುವ, ಜಿಗಿಯುವ, ಮತ್ತು ಹಾರುವ ಅದ್ಭುತಗಳು ಆತನ ಪಾದ ಮತ್ತು ಹರಡುಗಳನ್ನು ಬಲಪಡಿಸುವಷ್ಟು ಅದ್ಭುತವಾಗಿದ್ದವು. ನಾನು ಮಗುವಾಗಿದ್ದಾಗ, ನಾನು ನಡೆಯುವುದನ್ನು *ಕಲಿಯಬೇಕಾಯಿತು.* ಇದು ಕೆಲಸಮಯವನ್ನು ತೆಗೆದುಕೊಂಡಿತು; ನಂತರ ನಾನು ಹಾರಲು ಕಲಿತೆನು. ಈ ಕಾಲುಗಳಿಗೆ ಗಂಭೀರವಾದ ಗಾಯಗಳಾಗಿದ್ದರೆ ಆ ಸಮಸ್ಯೆಯು ವಾಸಿಯಾದ ನಂತರ ಆತನು ತಿರುಗಿ ನಡೆಯಲು ಕಲಿಯಲು ಆತನಿಗೆ ಚಿಕಿತ್ಸೆಯ ಅವಶ್ಯಕವಾಗಿತ್ತು. ಅದರೆ ಈ ಭಿಕ್ಷುಕನಿಗೆ ಯಾವ ಚಿಕಿತ್ಸೆಯ ಅವಶ್ಯಕತೆಯೂ ಇಲ್ಲ. ಕರ್ತನು ಆ ಮನುಷ್ಯನ ಮೆದುಳಿನಲ್ಲಿ ಎಲ್ಲ ಸಂಕೇತಗಳನ್ನು ಅಂದರೆ ನಡೆಯಲು ಸಂಕೀರ್ಣವಾದ ನೂರಾರು ಮಾಂಸಖಂಡಗಳನ್ನು ಮತ್ತು ಹೆಚ್ಚು ಸಂಕೀರ್ಣವಾದ ಹಾರುವ ಚಟುವಟಿಕೆಗಳನ್ನು ಮಾಡುವ ಸಂಕೇತಗಳನ್ನು ಹಾಕಿದನು. ಹೀಗಿದ್ದಾಗ "ಪ್ರಸಿದ್ಧವಾದ ಒಂದು ಸೂಚಕಕಾರ್ಯವು ಇವರ ಮೂಲಕವಾಗಿ ನಡೆಯಿತು ಎಂಬುದು ಗೊತ್ತಾಗಿದೆಯಷ್ಟೆ; ಅದು ಆಗಲಿಲ್ಲವೆನ್ನಲಿಕ್ಕಾಗದು" (4:16) ಎಂದು ನ್ಯಾಯಮಂಡಳಿಯು ನಂತರ ಹೇಳಿದ್ದರಲ್ಲಿ ಅಶ್ಚರ್ಯವೇನಿಲ್ಲ!

ಅಂದು ಅಪೊಸ್ತಲರು ಮಾಡಿದಂತೆ ಸ್ವಸ್ಥಮಾಡಲು ತಾವೂ ಶಕ್ತರಾಗಿದ್ದಾರೆಂದು ಇಂದು ಕೆಲವರೂ ಪ್ರತಿಪಾದಿಸುತ್ತಾರೆ. ಅವರು ಈ ತರದ ರೋಗಿಗಳನ್ನು ವಾಸಿಮಾಡಿದ್ದಾರೆ ಎನ್ನುವುದಕ್ಕೆ ನಾನು ಸಂಶಯಪಡುವುದಿಲ್ಲ. ವೈದ್ಯರು ನಮಗೆ ಹೇಳುವುದೇನೆಂದರೆ ಅನೇಕ ರೋಗ ಗಳು ಮೂಲತಹವಾಗಿ ಮಾನಸಿಕವಾಗಿರುತ್ತವೆ. "ಮಾನಸಿಕತೆಯು" ಗ್ರೀಕಪದವಾದ (*psuche*[27]) ಎಂಬುದಕ್ಕೆ ಸಮಾನವಾದ ಗ್ರೀಕ್ ಪದವು "ದೇಹ" (*soma*) ಎಂಬುದಕ್ಕೆ ಹೊಂದಾಣಿಕೆಯಾಗಿದೆ. ರೋಗವು ಮಾನಸಿಕವಾದದ್ದು ಎಂದು ಹೇಳುವಾಗ ಒಬ್ಬನಿಗೆ ಇರುವ ಸಮಸ್ಯೆಯು ನಿಜವಾಗಿ ಅಸ್ವಸ್ಥತೆಯದಲ್ಲ ಎಂದು ಹೇಳಲಾಗದು. "ಅದೆಲ್ಲವೂ ಆತನ ತಲೆಯಲ್ಲಿದೆ." ಬದಲಾಗಿ ಮಾನಸಿಕ ರೋಗದ ಪರಿಕಲ್ಪನೆಯು ಮನಸ್ಸು ಮತ್ತು ದೇಹ ಇವೆರಡರಲ್ಲಿ ಒಂದಕ್ಕೇನಾದರೂ ಸಂಭವಿಸಿದರೆ ಇನ್ನೊಂದಕ್ಕೂ ಸಂಭವಿಸುವಷ್ಟು ಹತ್ತಿರವಾಗಿ ಸಂಬಂಧಿತವಾದದ್ದು ಎಂಬುದನ್ನು ಗುರುತಿಸುತ್ತದೆ. ನಾವು ದೈಹಿಕವಾಗಿ ಅಸ್ವಸ್ಥರಾದಾಗ, ನಾವು ಸುಲಭವಾಗಿ ಮಾನಸಿಕವಾಗಿ ಹೆಚ್ಚಾಗಿ ಕಳೆಗುಂದುತ್ತೇವೆ ಎಂಬುದು ನಿಜವಲ್ಲವೇ? ಒಂದು ವೇಳೆ ಅಸ್ತವ್ಯಸ್ತವಾದಾಗ ಇದು ನಮ್ಮ ಮೇಲೆ ಶಾರೀರಕ ವಾಗಿ ಪರಿಣಾಮ ಬೀರುತ್ತವೆ ಅವು ತರತರವಾದ ಸಮಸ್ಯೆಗಳಿಂದ ಅಂದರೆ - ತಲೆನೋವಿನಿಂದ ಹೊಟೆಯ ನೋವಿನವರೆಗೆ ಮುಂತಾದ ವಿಭಿನ್ನ ತೊಂದರೆಗಳಿಗೆ ಎಡೆಮಾಡಿಕೊಡುತ್ತದೆ ಎಂಬುದ ಸತ್ಯವಲ್ಲವೇ? ಅನೇಕರು ಅರಿತುಕೊಂಡಂತೆ ದೇಹದ ಮೇಲಿನ ಮನಸ್ಸಿನ ಪ್ರಭಾವವು ಬಲವಾದುದು ಆಗಿದೆ. ಮಾನಸಿಕ ಕುರುಡುತನವು, ಮಾನಸಿಕ ಕಿವುಡುತನ, ಮಾನಸಿಕ ಕುಂಟುತನ, ಮಾನಸಿಕ ಪಾರ್ಶ್ವವಾಯು ಎಂಬ ಧೃಢೀಕರಿಸಿದ ಪ್ರಕರಣಗಳೂ ಇವೆ. ಒಬ್ಬನಿಗೆ ಮಾನಸಿಕ ಅಸ್ವಸ್ಥತೆ ಇದ್ದಾಗ, ಯಾರಾದರು ತನಗೆ ಸ್ವಸ್ಥಮಾಡುವ ಶಕ್ತಿಯು ಇದೆ ಎಂದು ಅವನನ್ನು *ಮನವರಿಕೆ*

ಮಾಡಿದಾಗ ಅವನು ಯಾರಿಂದಲಾದರೂ (*ಈ ರೀತಿಯ ಸ್ವಸ್ಥತೆಯು ಸ್ವಸ್ಥ ಹೊಂದುವವನಿಗೆ* ನಂಬಿಕೆ ಇರಬೇಕು ಎಂಬುದು ಬಲು ಮಹತ್ವವಾ ದದ್ದು) ತಿರುಗಿ ನಾನು ಹೇಳುವುದೇನೆಂದರೆ ಇಂದಿನ ವಾಸಿ ಮಾಡುವವರು ಎಂದು ಹೇಳಿ ಕೊಳ್ಳುವವರ ಬಗೆಗೆ ನಾನು ಸಂಶಯಿಸ ಲಾರೆನು.

ನನ್ನ ಸಂಶಯವೇನಂದರೆ ಈ ವ್ಯಕ್ತಿಗಳು ಅಪೊಸ್ತಲರ *ಹಾಗೆ ಸ್ವಸ್ಥಮಾಡುವವರು ಎಂದು.* "ಸ್ವಸ್ಥತೆ ಕೂಟಗಳು" ಎಂದು ಕರೆಯಲ್ಪಡುವ ಕೂಟಗಳಲ್ಲಿ ನಾನಿದ್ದೆನು ಮತ್ತು ಅವುಗಳಲ್ಲಿ ಅನೇಕವನ್ನು ನಾವು ದೂರದರ್ಶನದಲ್ಲಿ ನೊಡಿದ್ದೇನೆ. ಸುಂದರದ್ವಾರದ ಎಂದು ಕರೆಯಲ್ಪಡುವ ಬಾಗಿಲ ಬಳಿಯಲ್ಲಿ ನಡೆದ ಸಂಗತಿಗೆ ದೂರದಲ್ಲಿ ಯಾದರೂ ಹೋಲಿಕೆಯಿರುವ ಯಾವೊಂದನ್ನೂ ನಾನೆಂದಿಗೂ ಕಂಡಿಲ್ಲ! ನಾನು ನೋಡಿದಾಗ ಜನರು ತಮ್ಮ ಊರುಗೋಲನ್ನು ಬಿಟ್ಟು ಮತ್ತು ವೇದಿಕೆಯತ್ತ ಓಲಾಡುತ್ತಾ ನಡೆಯುತ್ತಾರೆ ... ಜನರು ತಮ್ಮ ಗಾಲಿಕುರ್ಚಿಯಿಂದ ಏಳುತ್ತಾರೆ ಮತ್ತು ಕಾಲನ್ನು ಎಳೆದುಕೊಳ್ಳುವ ಚಿಕ್ಕಪ್ರಯತ್ನವನ್ನು ಮಾಡುವುದನ್ನು ಕಂಡಿದ್ದೇನೆ ... ಆದರೆ ಬಾಡಿದ ಕಾಲುಗಳು ನನ್ನ ಕಣ್ಣಮುಂದೆಯೇ ಜೀವತುಂಬಿಕೊಂಡಿದ್ದನ್ನು ನಾನೆಂದಿಗೂ ನೋಡಿಲ್ಲ ... ಮುಂಚೆ ಎಂದಿಗೂ ನಡೆಯುವದಕ್ಕೆ ಆಗದೆ ಇದ್ದಂತವನು ನಡೆದದ್ದನ್ನು ಜಿಗಿದಿದ್ದನ್ನು ನಾನೆಂದಿಗೂ ನೋಡಿಲ್ಲ ಇದನ್ನು ಗುರುತಿಸಿಕೊಳ್ಳಿರಿ. ದೇವರು ಇಂದಿಗೂ ನಮ್ಮ ಜೀವಿತದಲ್ಲಿ ಕಾರ್ಯಮಾಡುತ್ತಿದ್ದಾನೆ, ಆದರೆ ಹೊಸ ಒಡಂಬಡಿಕೆಯಲ್ಲಿನ ಸಮಯದಲ್ಲಿದ್ದಂತವುಗಳಿಗಿಂತ ಆತನ ಮಾರ್ಗಗಳು ವಿಭಿನ್ನವಾದವುಗಳು ಆಗಿವೆ. ಆದರೆ ಆತನು ಇನ್ನು ಮುಂದೆ ಯಾವಾಗ ಕುಂಟನಾದವನನ್ನು ಸ್ವಸ್ಥ ಮಾಡುವಲ್ಲಿ ನೈಸರ್ಗಿಕ ನಿಯಮವನ್ನು ಮುರಿದಹಾಗೆ ಈಗ ಮಾಡುವುದಿಲ್ಲ. ದೇವರು ಅಪೊಸ್ತಲರರಿಗೆ[28] ಕೊಟ್ಟಂತಹದೇ ಶಕ್ತಿಯನ್ನು ಯಾರೂ ಇಂದು ಹೊಂದಿಲ್ಲ!

## ಸಂತೋಷ (3:8ಬಿ-11)

ನಾವು ಈಗ ಕಥೆಯ ಕಡೆಗೆ ತಿರುಗೋಣ: ವಾಸಿಯಾದ ಭಿಕ್ಷುಕನು ಈಗ ನಾವು ಮಾತನಾಡುತ್ತಿರುವ ವಿಷಯವಾಗಿ ಪೇತ್ರ ಮತ್ತು ಯೋಹಾನರು *ಹೊಂದಿದ* ಶಕ್ತಿಯ ಬಗೆಗೆ ಅತಿ ಸಂತೃಪ್ತವುಳ್ಳವನಾಗಿದ್ದನು. ತನ್ನ ಪ್ರತಿಷ್ಠೆಯನ್ನು ಎತ್ತಿ ಬದಿಗಿಟ್ಟನು: ನಲ್ವತ್ತರ ಪ್ರಾಯದವನಾದ ಆತನು ನಾಲ್ಕು ವರ್ಷದವನಂತೆ ಜಿಗಿದನು ಮತ್ತು ಹಾರಿದನು. ವಚನ 8 ತಿಳಿಸುವುದೇನೆಂದರೆ ಆತನು ತಾನು ಹೊಸದಾಗಿ ಕಂಡುಕೊಂಡ ಆರೋಗ್ಯಕ್ಕಾಗಿ "ದೇವರನ್ನು ಕೊಂಡಾಡಿದನು" ಎಂದು ಹೇಳುತ್ತದೆ: ಆತನು ಸ್ವಸ್ಥತೆಯ ನಿಜಮೂಲವನ್ನು ಕಂಡುಕೊಂಡನು. ಪೇತ್ರ ಮತ್ತು ಯೋಹಾನರು ಸ್ತ್ರೀಯರ ಅಂಗಳದಿಂದ ಪ್ರಾರಂಭಿಸಿದಾಗಲೂ ಆತನು ಅವರನ್ನು ಬಿಡಲಿಲ್ಲ. "ನಡೆಯುತ್ತಾ ಹಾರುತ್ತಾ ದೇವರನ್ನು ಕೊಂಡಾಡುತ್ತಾ ಅವರ ಜೊತೆಯಲ್ಲಿ ದೇವಾಲ ಯದೊಳಗೆ ಹೋದನು" (ವಚನ 8ಬಿ).

ಅಲ್ಲಿ ಪ್ರಾರ್ಥನೆಗಾಗಿ ಕೂಡಿಬಂದಿದ್ದ ಅವರೆಲ್ಲರೂ ಆತನನ್ನು ಕಂಡು ಬೆರಗಾಗಿರಬೇಕು. ಸ್ವಲ್ಪ ಊಹಿಸಿಕೊಳ್ಳಿ, ಭಾನುವಾರ ಮುಂಜಾನೆಯ ಆರಾಧನಾ ಸಮಯದ ಮಧ್ಯದಲ್ಲಿ ಯಾರೋ ಒಬ್ಬರು ಪ್ರಾಂಗಣಕ್ಕೆ ಓಡಿ ಬಂದು, ಉನ್ಮತ್ತರಂತೆ ಸುತ್ತಲೂ ಜಿಗಿಯುತ್ತಾ ಹಾರುತ್ತಾ "ಸ್ತೋತ್ರ ದೇವರೇ!" ಎಂದು ಕೂಗಿದಾಗ ನಿಮ್ಮ ಪ್ರತಿಕ್ರಿಯೆಯ ಏನಾಗಿರುತ್ತದೆ? ವಾಸಿಯಾದ ಭಿಕ್ಷುಕನು ದೊಡ್ಡ ಧ್ವನಿಯೊಡನೆ ಸ್ತ್ರೀಯರ ಅಂಗಳದೊಳಕ್ಕೆ ಹೋದಾಗ ಅಲ್ಲಿ ಭಾವನಾತ್ಮಕ ವಾತಾವರಣವು ಉದ್ಭವಿಸಿತು. ಮೊದಲು, ಅಲ್ಲಿದ್ದವರೆಲ್ಲ ಅಸ್ತವ್ಯಸ್ತಗೊಂಡರು: "ಪ್ರಾರ್ಥನಾ ಸಮಯದ ಪವಿತ್ರತೆಯಲ್ಲಿ ತಲೆಕೆಟ್ಟ ಮನುಷ್ಯನು ಮಧ್ಯಪ್ರವೇಶಿಸಲು ಹೇಗೆ ಧೈರ್ಯಮಾಡಿದನು!" ಒಮ್ಮೆಲೇ ಹೀಗೆ, ಅವರ ಕಿರಿಕಿರಿಯು ಅಶ್ಚರ್ಯಕ್ಕೆ ತಿರುಗಿತು:

> ಅವನು ನಡೆಯುತ್ತಾ ದೇವರನ್ನು ಕೊಂಡಾಡುತ್ತಾ ಇರುವುದನ್ನು ಜನರೆಲ್ಲರು ನೋಡಿ

ಇವನು ದೇವಾಲಯದ ಸುಂದರದ್ವಾರವೆಂಬ ಬಾಗಿಲಿನಲ್ಲಿ ಕೂತು ಭಿಕ್ಷಾಬೇಡುತ್ತಿದ್ದವನೆಂದು ಗುರುತುಹಿಡಿದು[29] ಅವನಿಗೆ ಸಂಭವಿಸಿದ್ದಕ್ಕೆ ವಿಸ್ಮಯಹಿಡಿದವರಾಗಿ ಬಹಳ ಬೆರಗಾದರು (ವಚನಗಳು 9, 10).

ವಚನ 11 ಹೇಳುವುದೇನೆಂದರೆ "ಭಿಕ್ಷುಕನು ಪೇತ್ರ ಮತ್ತು ಯೋಹಾನರಿಗೆ ಅಂಟಿಕೊಂಡೆ ಇದ್ದನು" ಆತನು ನಾನು ಯಾವಾಗಲೂ ಎಲ್ಲಿ ಕೂತುಕೊಳ್ಳುತ್ತಿದ್ದೆನೋ ಅಲ್ಲಿಯೇ ಭಿಕ್ಷೆಬೇಡುವುದಕ್ಕಾಗಿ ಕೂತುಕೊಂಡಿದ್ದೆನು: "ಆಗ ಈ ಮನುಷ್ಯರು ಎದ್ದೇಳಲು ಮತ್ತು ನಡೆಯಲು ನನಗೆ ಹೇಳಿದರು. ಆಗ ಈ ಮನುಷ್ಯನು ನನ್ನನ್ನು ಎತ್ತಿದನು - ಮತ್ತು ದೇವರು ನನ್ನನ್ನು! ಸ್ವಸ್ಥಮಾಡಿದನು ನೋಡಿರಿ!" ಎಂದು ಅಪೊಸ್ತರನ್ನು ಹಿಡಿದುಕೊಂಡೆ ಇದ್ದು ಎಲ್ಲರೂ ಕೇಳುವಂತೆ ಜೋರಾಗಿ ಕೂಗಿ ಹೇಳುತ್ತಿರುವುದನ್ನು ನಾನು ನೋಡಬಲ್ಲೆನು!

ಆತನು ಗಾಳಿಯಲ್ಲಿ ಮೇಲಕ್ಕೆ ಜಿಗಿದನು ಮತ್ತು ಕಾಲು ತಿರುಗಿಬಂದಂತದ್ದು ಕಿವಿಯಿಂದ ಕಿವಿಗೆ ಸಾಗಿತು, ಅದ್ಭುತವು ಸಂಭವಿಸಿದ್ದಕ್ಕೆ ಯಾರೊಬ್ಬರೂ ಸಂಶಯಪಡಲಿಲ್ಲ. ಆ ಜನಜಂಗುಳಿಯ ಕೂಗಾಟವು ಪೇತ್ರ ಮತ್ತು ಯೋಹಾನ ಹಾಗೂ ಭಿಕ್ಷುನತ್ತ ಅನೇಕ ಪ್ರಶ್ನೆಗಳನ್ನು ಎಸೆಯುವುದನ್ನು ನಾನು ಕೇಳುತ್ತಿದ್ದೇನೆ. ಏನು ಸಂಭವಿಸಿತು ಎಂಬ ಸುದ್ಧಿಯು ದೇವಾಲಯದ[30] ಇತರ ಭಾಗಗಳಿಗೂ ಹರಡಿತು, ಜನಜಂಗುಳಿಯು ಸ್ತ್ರೀಯರ ಅಂಗಳದಲ್ಲಿ ದೊಡ್ಡದಾಗುತ್ತಾ ತುಂಬಿಕೊಂಡಿತು. ಕೊನೆಯಲ್ಲಿ, ಪೇತ್ರನು ಆತನ ಕೈಗಳನ್ನು ಹಿಡಿದನು ಮತ್ತು ಎಲ್ಲರಿಗೂ ಆತನನ್ನು ಅನುಸರಿಸಲು ಸೂಚಿಸಿದನು. ಆತನು ಮತ್ತು ಅವರು ಅನ್ಯರ ಅಂಗಳದಿಂದ ಆಚೆಗೆ ನಡೆದರು "ಅಲ್ಲೊಂದು ಕೋಣೆಯಿತ್ತು ಮತ್ತು ಅಲ್ಲಿ ಆತನ ಧ್ವನಿಯು ಕೇಳಲು ಸಾಧ್ಯ ವಾದಂತಿತ್ತು.[31] ಭಿಕ್ಷುಕನು ಪೇತ್ರ ಯೋಹಾನರನ್ನು[32] ಹಿಡುದುಕೊಂಡೆ ಇರುವಾಗ ಅಶ್ಚರ್ಯಪಡುತ್ತಿರುವ[33] ಆ ಜನರೆಲ್ಲರು ಅವರ ಬಳಿಗೆ ಸೊಲೊಮೋನನದೆಂಬ ಹೆಸರುಳ್ಳ ಮಂಟಪಕ್ಕೆ ಗುಂಪುಗುಂಪಾಗಿ ಓಡಿ ಬಂದರು"[34] (ವಚನ 11).

ಸೊಲೆಮೋನನ ಮಂಟಪವು ಅನ್ಯರ ಅಂಗಳದ ಪೂರ್ವದ ಗೋಡೆಯ ಒಳಗಿತ್ತು. ಇದು ಸುಮಾರು 600 ಅಡಿ ಉದ್ದವೂ 60ಅಡಿ ಅಗಲವೂ ಆಗಿತ್ತು. 27ಅಡಿಯ 2ಸಾಲು ಕಮಾನುಗಳನ್ನು ಹೊಂದಿದ್ದು, ದೇವದಾರು[35] ಮರದಕಟ್ಟಿಗೆಯ ಮಾಳಿಗೆಯಿಂದ ಮುಚ್ಚಲ್ಪಟ್ಟಿತ್ತು. ಯೇಸು ಅಲ್ಲಿ ಸುವಾ ರ್ತೆಯನ್ನು ಸಾರಿದ್ದನು (ಯೋಹಾನ 10:23), ಮತ್ತು ಇದು ಆದಿ ಕ್ರೈಸ್ತರ ಜನಪ್ರೀಯವಾದ ಕೂಟದ ಸ್ಥಳವಾಗಿತ್ತು (5:12). ಇಲ್ಲಿ ಪೇತ್ರನು ತಾನು ನೋಡಬಹುದಾದ ಮತ್ತು ಕೇಳಬಹುದಾದ ಸ್ಥಳದಲ್ಲಿ ನಿಂತುಕೊಂಡಿರಬಹುದು.

ಈ ಹಿಂದೆ, ಸ್ನಾನಿಕನಾದ ಯೋಹಾನನ ಸಂದೇಶಕರು ಮೆಸ್ಸೀಯನು ಬಂದಿದ್ದಾನೆ ನಾವು ಆತನನ್ನು ಅರಿತಿದ್ದೇವೆ ಕಾರಣ "ಕುಂಟನು ನಡೆದಾಡುತ್ತಾನೆ ಎಂದು" ಅವರು (ಹೋಲಿಸಿ ಲೂಕ 7:22; ಮತ್ತಾಯ 11:5) ಹೇಳುತ್ತಿದ್ದರು. ಪ್ರವಾದಿಯಾದ ಯೇಶಾಯನು ಮೆಸ್ಸೀಯನ ಯುಗದ ಬಗೆಗೆ ಈ ರೀತಿ ಹೇಳುತ್ತಾನೆ "ಆಗ ಕುಂಟನು ಜಿಂಕೆಯ ಹಾಗೆ ಜಿಗಿಯುತ್ತಾನೆ" ಎಂದು (ಯೆಶಾಯ 35:6). ಸೊಲೊಮೋನನ ಮಂಟಪದಲ್ಲಿ ಸೇರಿಬಂದಿರುವವರೆಲ್ಲ ಪ್ರವಾದನೆಯು ವಿಸ್ಮಯಕರ ವಾದ ರೀತಿಯಲ್ಲಿ ಸಂಪೂರ್ಣವಾದುದ್ದನ್ನು ಕಂಡರು. ಪೇತ್ರನು ಅವರ ಸಂಪೂರ್ಣ ಲಕ್ಷವನ್ನು ಹೊಂದಿದ್ದನು;[36] ಮತ್ತು ಅವರು ಆತನ ಉಪದೇಶಕ್ಕೆ ಸಿದ್ಧರಾದರು.

## ಮುಕ್ತಾಯ

ನಮ್ಮ ಮುಂದಿನ ಪಾಠದಲ್ಲಿ ನಾವು ಪೇತ್ರನ ಬೋಧನೆಯನ್ನು ಅಭ್ಯಾಸಿಸೋಣ. ಆದರೆ ಈಗ ನಾವು ಈ ಅಧ್ಯಯನವನ್ನು ಮುಗಿಸಬೇಕು ಮತ್ತು ಇದನ್ನು ನಮ್ಮ ಜೀವಿತಕ್ಕೆ ಅನ್ವಯಿಸಿಕೊಳ್ಳಬೇಕು. ಇತ್ತೀಚೆಗೆ ನಾವು ಭಿಕ್ಷುಕನ ಸ್ಥಿತಿಯನ್ನು ವರ್ಣಿಸಲು ವರ್ಣನಾತ್ಮಕ

ಪರಿಕಲ್ಪನೆಯನ್ನು ಬಳಸಿದುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ಒಂದು ವೇಳೆ ನೀವು ಇನ್ನೂ ಕ್ರೈಸ್ತರಾಗಿದ್ದರೆ ಈ ವಿಚಾರವು ನಿಮಗೆ ಬಂದಿದೆಯಾ? ಆ ಮನುಷ್ಯನು ದೈಹಿಕವಾಗಿ ಕುಂಟನಾಗಿರುವಂತೆ ನಾವು ಆತ್ಮೀಕವಾಗಿ ಕುಂಟರಾಗಿದ್ದೇವೆಯಾಆ ಮನುಷ್ಯನ ಸ್ವಸ್ಥವಾಗುವಿಕೆಯು ನಾನು ವರ್ಣಿಸುವಂತೆ, "ಶಾರೀರಿಕವಾಗಿ ಭಿಕಾರಿಯಾದ ಆ ಮನುಷ್ಯನ ಹಾಗೆ ನಾನು ಕೂಡ ಆಲ್ಪೇಯವಾಗಿ ಅಂಗವಿಕಲನ್ನು?" "ನನಗೆ ಕೂಡಾ ಏಳಲು ಮತ್ತು ನಡೆಯಲು ದೇವರ ಸಹಾಯದ ಅವಶ್ಯಕತೆಯಿದೆ" (3:26) ಎಂದು ನೀನು ಅರಿತುಕೊಂಡಿದ್ದೀಯಾ?

ದೇವರು ನಮಗೆ ಆತ್ಮೀಕ *ಸ್ವಸ್ಥತೆಯನ್ನು* ಕೊಡುವಾಗ ಆ ಕುಂಟಮನುಷ್ಯನಂತೆ, ನಮ್ಮಲ್ಲಿ ಅನೇಕರು ದೇವರಿಗೆ: "ಸಡಿಲವಾದ ಬದಲಾವಣೆ" (ಸುಲಭವಾದ ಪರಿಹಾರ) ಕೇಳುವವರಾಗಿದ್ದಾರೆ. ಸ್ವಸ್ಥಮಾಡಲು ಯೇಸುಕ್ರಿಸ್ತನ ಹೆಸರಿನಲ್ಲಿ ಇನ್ನೂ ಶಕ್ತಿ ಇದೆ. ಇನ್ನೂ ಒಂದುವೇಳೆ ನೀನು ಆತನ ಪವಿತ್ರ ಹೆಸರಿನಲ್ಲಿ ಪಶ್ಚಾತ್ತಾಪಪಡದೆ ಹೋದರೆ ಮತ್ತು ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದದೇ ಹೋದರೆ *ಈಗಲೇ* ಇದೇ ಸಮಯ; ಈ ದಿವೇ ನೀನು "ಸಂತೋಷದಿಂದ ಜಿಗಿಯಬಹುದು" ಮತ್ತು ಭಿಕ್ಷುಕನು ಮಾಡಿದಂತೆ ದೇವರನ್ನು ಸ್ತುತಿಸಬಹುದು!

## ಪ್ರಸಂಗದ ಟಿಪ್ಪಣಿ

ಇಂದು ಅದ್ಭುತಗಳು ಎಂದು ಕರೆಯಲ್ಪಡುವವುಗಳ ವಿರುದ್ಧ ಬಲು ಪರಿಣಾಮಕಾರಿ ವಾದಗಳು ಬೈಬಲ್‌ನ ಅದ್ಭುತಗಳ ಜೊತೆ ಇಂದು ಏನು ಸಂಭವಿಸುತ್ತವೆ ಎಂಬುದನ್ನು ಹೋಲಿಸುವವುಗಳಾಗಿವೆ ಎಂದು ಹೇಳಲಾಗುತ್ತವೆ. ಅಪೊಸ್ತಲರ ಕೃತ್ಯಗಳು 3 ಇದನ್ನು ಮಾಡುವಂತೆ ಸುಸಂದರ್ಭವನ್ನು ನಿಮಗೆ ಕೊಡುತ್ತೇನೆ ನೀವು ಅಪೊಸ್ತಲರ ಕೃತ್ಯಗಳು 3ರ ಉದಾಹರಣೆಗಳನ್ನು ಇಂದಿನ ಸ್ವಸ್ಥತೆ ಎಂದು ಕರೆಯಲ್ಪಡುವ ಪ್ರಕರಣಗಳಿಗೆ ಹೋಲಿಸಿ ನಿಮ್ಮ ಪಾಠವು 3:1-11ನ್ನು ಕೇಂದ್ರಿಕೃತವಾಗಿರಿಸಬಹುದು, ಆದರೆ ಅದರ ಜೊತೆಯಲ್ಲಿ ಅಪೊಸ್ತಲರ ಕೃತ್ಯಗಳು 3 ಮತ್ತು 4 ಇತರ ವಚನಗಳಿಂದ ವಿವರಗಳನ್ನು ಸೇರಿಸುವುದು ಸಹ ಅವಶ್ಯವಿದೆ (3:12, 16; 4:7-10, 14, 15, 22; ಮುಂತಾದವು).

ಟಿಪ್ಪಣಿಗಳು

[1]ಈ ಪುಸ್ತಕದ ಮೊದಲಭಾಗದಲ್ಲಿ, ಕಂಡುಬಂದ "ನಾನು ಸದಸ್ಯನಾಗಲೂ ಇಚ್ಛಿಸಿದ ಸಭೆ" ಪಾಠದ ವೇದಭಾಗ ಮತ್ತು ಅಡಿನುಡಿಗಳಲ್ಲಿದೆ, ಪ್ರಾರಂಭದಲ್ಲಿನ ಯೆಹೂದಿ ಕ್ರೈಸ್ತರು ದೇವಾಲಯದಲ್ಲಿ ಆರಾಧಿ ಸುತ್ತಿರುವುದನ್ನು ಕುರಿತು ಸಂಕ್ಷಿಪ್ತವಾಗಿ ನಾವು ಚರ್ಚಿಸಿದ್ದೇವೆ. ದೇವರು ತನ್ನ ಚಿತ್ತವನ್ನು ಒಂದೇ ಸಾರಿ ಪ್ರಕಟಿಸಲಿಲ್ಲ ಎಂಬುದು ನಿಜವಾದಂತೆಯೇ ಅಲ್ಲಿ ಆದಿ ಕ್ರೈಸ್ತರು ತಿಳಿಯದೆ ಇರುವಂತದ್ದು ಸಹ ಬೇಕಾದಷ್ಟಿದೆ, ಕ್ರೈಸ್ತರು ಹೇಗೆ ಆರಾಧನೆ ಮಾಡಬೇಕು ಎಂಬುದು ಪ್ರಕಟಿಸಲ್ಪಟ್ಟ ಮೊದಲ ಸಂಗತಿಯನ್ನು ಇದು ಸೂಚಿಸುತ್ತದೆ (2:42). ಆದಿ ಕ್ರೈಸ್ತರು ಯೆಹೂದ್ಯರ ವಿಧಿವಿಧಾನಗಳನ್ನು ಮುಂದುವರೆಸುವುದರ ತೀರ್ಮಾನದ ಬಗೆಗೆ ಅಪೊಸ್ತಲರ ಕೃತ್ಯಗಳು 2 ಮತ್ತು 3ನೆಯ ಅಧ್ಯಾಗಳು ಒತ್ತಾಯಿಸುತ್ತಿಲ್ಲ. ಯಾವುದೇಸಂಧರ್ಭದಲ್ಲಿ ಇದಕ್ಕೆ ಹೊಂದಿಕೊಂಡಿರುವಂತೆ ಯಾವುದೇ ಸಂಗತಿಗಳನ್ನು ಕ್ರಿ.ಶ. 70ರಲ್ಲಿ ಆ ದೇವಾಲಯದ ನಾಶನವೂ ಕೂಡಾ ಇದನ್ನು ತಳ್ಳಿಹಾಕುತ್ತದೆ. [2]ಕೆಲ ಗ್ರಂಥಕರ್ತರು ಹೇಳುವುದೇನೆಂದರೆ ದೇವಾಲಯವು 600,000 ಚದುರು ಅಡಿಯ ಕ್ಷೇತ್ರವನ್ನು ಆವರಿಸಿದೆ. [3]ಸ್ತ್ರೀಯರ ಅಂಗಳವು ದೊಡ್ಡದಾದ ಪ್ರದೇಶವನ್ನು ಹೊಂದಿದ್ದು ದೇವಾಲಯದ ಸಂಕೀರ್ಣದಲ್ಲಿ ಯೆಹೂದಿ ಗಂಡಸರೂ ಮತ್ತು ಸ್ತ್ರೀಯರೂ ಪ್ರಾರ್ಥನೆ ಮಾಡಲು ಸೇರಿಬರುತ್ತಿದ್ದ ಪವಿತ್ರಭಾಗವಾಗಿತ್ತು. ಇದು ಸುಮಾರು ಎರಡುನೂರು ಚದರ ಅಡಿಯ ಪ್ರದೇಶವಾಗಿತ್ತು. ಈ ಪಾಠದಲ್ಲಿ ಸೂಚಿಸಲಾದ ಆಧಾರಗಳ ಜೊತೆಗೆ ಈ ಪುಸ್ತಕದಲ್ಲಿ ಸಿಕ್ಕುವ ದೇವಾಲಯದ ನಕ್ಷೆಯನ್ನೂ ನೋಡಿರಿ.

[4]ಕೀರ್ತನೆ 55:17 ದಾವೀದನು "ಸಾಯಂಕಾಲ ಮತ್ತು ಮಧ್ಯಾಹ್ನ ಮತ್ತು ಮುಂಜಾನೆ ಪ್ರಾರ್ಥಿಸುತ್ತಿದ್ದನು" ಎಂದು ತಿಳಿಸುತ್ತದೆ. ದಾನಿಯೇಲನು "ದಿನಕ್ಕೆ ಮೂರಾವರ್ತಿ ಪ್ರಾರ್ಥಿಸುತ್ತಿದ್ದನು" (ದಾನಿಯೇಲನು 6:10), ಸಂಧ್ಯಾನೈವೇದ್ಯ ಸಮಯವನ್ನು ಒಳಗೊಂಡು (ದಾನಿಯೇಲನು 9:21). ಯಾಜಕರು ಕುರಿಯ ಬಲಿಯನ್ನು ದಿನಕ್ಕೆ ಎರಡಾವರ್ತಿ ಅರ್ಪಿಸುತ್ತಿದ್ದರು (ವಿಮೋಚನ ಕಾಂಡ 29:38-43) ಹೊತ್ತಾರೆಯಲ್ಲೂ ಮತ್ತು ಸಾಯಂಕಾಲದಲ್ಲೂ ಯಜ್ಞದ ಸುವಾಸನೆಯು ಇರುತ್ತಿತ್ತು (ವಿಮೋನಚನ ಕಾಂಡ 30:1-10) ಕಾಣಿಕೆ ಅರ್ಪಿಸುವದು ಮತ್ತು ಯಜ್ಞದ ಸುವಾಸನೆಯು ಬಹುಶ ಅದೇ ಸಮಯದಲ್ಲಿ ನೆರವೇರುತ್ತಿತ್ತು. ಇವುಗಳು ನೆರವೇರುವಾಗಲೇ ಜನರು ದೇವಾಲಯದಲ್ಲಿ ಸೇರಿ ಬಂದು ಪ್ರಾರ್ಥಿಸುತ್ತಿದ್ದರು (ಲೂಕ 1:8-10). ಎಂಬುದರ ಅರ್ಥ ಇದೇ ಸಮಯದಲ್ಲಿ ಮಾತ್ರ ಪ್ರಾರ್ಥಿಸಬೇಕು ಎಂಬುದಾಗಿ ಯೆಹೂದಿಗಳು ತಿಳಿದಿದ್ದರು ಎಂಬುದಾಗಿ ಅಲ್ಲ, ಬದಲಾಗಿ ನಿಯಮಿಸಲ್ಪಟ್ಟ ಸಮಯದಲ್ಲಿ ಮತ್ತು ಅದರೊಡನೆ ಇತರ ಸಮಯಗಳಲ್ಲಿಯೂ ಕೂಡಾ ಪ್ರಾರ್ಥನೆಯ ಮೌಲ್ಯದಲ್ಲಿ ಅವರು ನಂಬಿಕೆಯುಳ್ಳವರಾಗಿದ್ದರು. [5]"ಬಿಕ್ಷೆಯು" ಉಪಕಾರದಿಂದ ಕೂಡಿದ ಸಹಾಯವಾಗಿದೆ. NIV ವಚನ 3ರಲ್ಲಿ "ಆತನು ಅವರಿಂದ ಹಣವನ್ನು ಕೇಳಿದನು" ಎಂದಿದೆ. [6]ಆ ದಿನಗಳಲ್ಲಿ ಬಿಕ್ಷುಕರಿಗೆ ಮೂರು ಪ್ರಮುಖ ಸ್ಥಳಗಳಿದ್ದವು. (1) ಶ್ರೀಮಂತರ ಬಾಗಿಲಿನ ಹತ್ತಿರ (ಲಾಜರನು ಮಾಡಿದ್ದು), (2) ಮುಖ್ಯ ಬೀದಿಗಳಲ್ಲಿ (ಬಾರ್ತಿಮಾಯನು ಮಾಡಿದ್ದು) ಅಥವಾ (3) ಆರಾಧನೆಯ ಸಮಯದಲ್ಲಿ (ಈ ಮನುಷ್ಯನು ಮಾಡಿದಂತೆ). ಬಿಕ್ಷೆಯನ್ನು ಕೊಡುವದು ಯೆಹೂದಿ ಧರ್ಮದಲ್ಲಿ ಶ್ರೇಷ್ಟವಾದ ಕಾರ್ಯ ಎಂದು ಪರಿಗಣಿಸಲ್ಪಡುತ್ತಿತ್ತು. ಹೀಗೆ ಆರಾಧನೆಗೆ ಹೋಗುವವರು ಮತ್ತು ಬರುವವರು ಬಹುಶಃ ಕೊಡುವ ಮನೋಭಾವನೆ ಉಳ್ಳವರಾಗಿದ್ದರು. [7]ಭಿಕ್ಷುಕರಿಗೆ ದೇವಾಲಯು ಇದ್ದ ಪ್ರತ್ಯಕ್ಷ ಸ್ಥಳದಲ್ಲಿ ಅನುಮತಿಸಲಾಗುತ್ತಿರಲಿಲ್ಲ (ಕಟ್ಟಡವು ಪರಿಶುದ್ದ ಸ್ಥಳ ಮತ್ತು ಅತಿ ಪರಿಶುದ್ದ ಸ್ಥಳ ಎಂಬ ಸ್ಥಳಗಳನ್ನು ಹೊಂದಿತ್ತು) ಮತ್ತು ದೇವಾಲಯದ ಸಂಪೂರ್ಣ ಹೊರಗೋಡೆಯು ಭಿಕ್ಷುಕರಿಗೆ ಭಿಕ್ಷೆಬೇಡಲು ಯೋಗ್ಯ ಸ್ಥಳವಾಗಿರಲಿಲ್ಲ. ಆದರೆ ಇನ್ನೊಂದೆಡೆಯಲ್ಲಿ ಸ್ತ್ರೀಯರ ಅಂಗಳದ ಪ್ರವೇಶ ದ್ವಾರವು ಭಿಕ್ಷುಕರಿಗೆ ಬಿಕ್ಷೆಬೇಡಲು ಯೋಗ್ಯ ಸ್ಥಳವಾ ಗಿತ್ತು. [8]ಜೋಸೆಫಸ್ F. F. Bruce, *The Book of the Acts*, The New International Commentary on the New Testament, rev. ed [Grand Rapids. Mich: Wm. B. Eerdmans Publishing Co., 1988], 77). [9]ವಚನ 7 ಸೂಚಿಸುವುದೇನೆಂದರೆ, ಆತನ ಸಮಸ್ಯೆಯು "ಆತನ ಪಾದಗಳು ಮತ್ತು ಹರಡುಗಳಲ್ಲಿ" ಇರುವದು ನೂನ್ಯವೇ ಆಗಿತ್ತು. ಕೆಲವರು ಯೋಚಿಸುವುದೇನೆಂದರೆ ಆತನ ಸಮಸ್ಯೆಯು ಆತನ ಹರಡುಗಳು ಮತ್ತು ಕೀಲುಗಳು ಎಂದಿಗೂ ಬೆಳವಣಿಗೆಯಾಗದಿರುವುದೇ ಆಗಿದೆ. [10]ಆಗಿನ ಕಾಲದಲ್ಲಿ ಕುರ್ಚಿ ಮೇಜಿನ ಮೇಲಿನ ಕೆಲಸಗಳು ಇರಲೇ ಇಲ್ಲ.

[11]ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿ, ನಾನು ಪೇತ್ರ ಯೋಹಾನರ ಪಾಲಿನ ಕರುಣೆ ಮತ್ತು ಸಹಾನುಭೂತಿಯ ಕಡಿತವನ್ನು ಮಾಡುತ್ತಿಲ್ಲ. ಆತರೆ ನೂರಾರು ಅಂಗವಿಕಲ ಭಿಕ್ಷುಕರು ವಾಸಿಯಾಗಿರಲಿಕ್ಕೆ ಸಾಧ್ಯವಿತ್ತು. ಆದರೆ ಈ ಒಂದು ವಿಶಿಷ್ಟ ಸಂದರ್ಭಕ್ಕೆ ಯಾಕೆ ಈ ವಿಶಿಷ್ಟವ್ಯಕ್ತಿಯು ಆಯ್ಕೆಯಾದನು ಎಂಬುದಕ್ಕೆ ಕೆಲ ವಿಶೇಷ ಕಾರಣಗಳಿವೆ. [12]ಆತನು ಕೊನೆಯ ಪಕ್ಷ 8:30ಕ್ಕೆ ದೇವಾಲಯದಲ್ಲಿ ಇರುವುದು ಅವಶ್ಯವಾಗಿತ್ತು. ಮೊದಲ "ಭಾಗದ ಪ್ರಾರ್ಥನೆಯು" ಸುಮಾರು ಮುಂಜಾನೆ 9ಕ್ಕೆ ಆಗುತ್ತಿತ್ತು. [13]ಕೆಲ ಭಿಕ್ಷುಕರಿಗೆ ವರ್ಷಪೂರ್ತಿ ಸಮೃದ್ಧಿಯಾಗಿರುತ್ತಿತ್ತು. ಆದರೆ ಪ್ರತ್ಯೇಕವಾಗಿ ಈ ಮನುಷ್ಯನ ವಿಷಯದಲ್ಲಿ ಆಗಲಿಲ್ಲ. ಆತನು ಸ್ವಸ್ಥವಾದಾಗ, ಅತಿ ಸಂತೃಪ್ತ ರೀತಿಯಲ್ಲಿ ಸಂತೋಷಪಟ್ಟನು. ಆದರೆ ಅವನು ಸ್ವಸ್ಥನಾಗಿರುವದು ಜೀವನದ ಆದಾಯಕರ ಮಾರ್ಗವನ್ನು ಅವನಿಂದ ತೆಗೆದು ಹಾಕಿತು ಎಂದು ಇದು ಸೂಚಿಸುವುದಿಲ್ಲ. [14]ಕರುಣೆಯನ್ನು ಹೊರಸೆಳೆಯುವಲ್ಲಿ ಸಾಧ್ಯವಾದಷ್ಟು ಅಸಹಾಯಕ ನೋಟವನ್ನು ಬೀರುವದು ಭಿಕ್ಷುಕರಿಗೆ ಅಭ್ಯಾಸವಾಗಿತ್ತು. [15]ಕುಂಟ ಮನುಷ್ಯನನ್ನು ಯಾರು ಪ್ರತಿದಿನ ಕರೆತರುತ್ತಿದ್ದರು ಎಂದು ನಮಗೆ ಹೇಳಲ್ಪಟ್ಟಿಲ್ಲ. ಬಹುಶ ಅವರ ಸ್ನೇಹಿತರಿರಬಹುದು ಅಥವಾ ವ್ಯಕ್ತಿಗತ ಸಂಘಟನೆಯಾಗಿದ್ದು ಈ ರೀತಿಯ ಬಿಕ್ಷಕರನ್ನು ಅವರ ಭಿಕ್ಷಾಟನಾ ಸ್ಥಳಕ್ಕೆ ತಲುಪಿಸುವ ಜೀವಂತ ಸಾರಿಗೆಗಳಾಗಿರಬಹುದು. ಪ್ರತಿದಿನದ ಕೊನೆಯಲ್ಲಿ ಇವರು ಭಿಕ್ಷುಕರಿಂದ ತಮ್ಮ ಹಪ್ತಾವಸೂಲಿ ಮಾಡುತ್ತಿರಬಹುದು. [16]ಪೇತ್ರ ಯೋಹಾನರಿಂದ ದಾನವನ್ನು ಕುತೂಹಲದಿಂದ ಅಪೇಕ್ಷಿಸುತ್ತಿದ್ದ ಆತನು (ಭಿಕ್ಷುಕನು) ಇದನ್ನು ಸೂಚಿಸಿದನು. [17]ಸಾಮಾನ್ಯವಾಗಿ ಭಿಕ್ಷುಕರು ಯಾವ ಉಳಿತಾಯವನ್ನೂ ಮಾಡಿತ್ತಿರಲಿಲ್ಲ. ಮತ್ತು ಪ್ರತಿದಿನ ಅವರು ಏನನ್ನು ಪಡೆಯುತ್ತಿದ್ದರೋ ಅದರಿಂದಲೇ ದಿನವಿಡಿಯ ಜೀವನ ಕಳೆಯುತ್ತಿದ್ದರು. [18]ಅಪೊಸ್ತಲರ ತಮ್ಮನ್ನು ಸೇವೆಗೆ ಅರ್ಪಿಸಿಕೊಂಡಿದ್ದರಿಂದ ಪ್ರಾರ್ಥನೆಯಲ್ಲಿ ಮತ್ತು ದೇವರ ವಾಕ್ಯವನ್ನು ಬೋಧಿಸುವದರಲ್ಲಿ (6:4) ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರಿಂದ ಪ್ರತ್ಯೇಕ ಜೀವನವನ್ನು ಮಾಡಿಕೊಳ್ಳಲು ಅವರಿಗೆ ಸಮಯವಿರಲಿಲ್ಲ. ಆದ್ದರಿಂದ ಇತರ ಸದಸ್ಯರಿಗೆ ನೆರವಾ ಗುತ್ತಿರುವ ಸದಸ್ಯರ ಮಧ್ಯದಲ್ಲಿ ಇದ್ದಿರಲಿಕ್ಕೆ ಸಾಕು 2:45.

[19]ಎರಡೂ ವಿವರಗಳೂ ಒಂದೇ ಆಗಿದ್ದಾಗ ಭಾಷ್ಯಾಕಾರರು ಅಪೊಸ್ತಲರ ಕೃತ್ಯಗಳು 14ರಲ್ಲಿಯೂ ಇರುವುದನ್ನು ಓದುವವರಾಗಿದ್ದಾರೆ. ಹೇಗೋ, ಅವೆರಡೂ ವಿವರಗಳ ಸಂದರ್ಭಗಳು ಬೇರೆಯಾಗಿವೆ. [20]ಒಬ್ಬ ಮನುಷ್ಯನು ಅದ್ಭುತೀಯ ಸ್ವಸ್ಥತೆಯನ್ನು ಕಂಡುಕೊಳ್ಳುವಲ್ಲಿ ನಿರಾಶನಾಗುವಾಗ, ಅನೇಕ ಸಾರಿ ಅದು ಆತನಲ್ಲಿ ಇರುವಂತಹ ನಂಬಿಕೆಯು ಆಗಿದೆ. ಅವರ ಸ್ವಂತ ಕಪಟತನವನ್ನು ಮುಚ್ಚಿಹಾಕಲು, ಈ ಧಾರ್ಮಿಕ ನಾಯಕರುಗಳು (ಸಲಾಕಾರರು) ರೋಗಿಯಾಗಿದ್ದ ಮನುಷ್ಯ ತಾನು ಹಿಡಿದುಕೊಳ್ಳುವ ಆತನ ನಂಬಿಕೆಯನ್ನು ಅವರು ಅಲ್ಲಗಳೆಯುತ್ತಾರೆ.

[21]ಕೆಲಸಾರಿ ನಂಬಿಕೆಯು ಒಬ್ಬ ಪಡೆದುಕೊಳ್ಳುವ ಅದ್ಭುತದ ಬಗೆಗ ಸೂಚಿಸುತ್ತದೆ, ಕೆಲಸಾರಿ ಪ್ರತಿಯೊಂದು ಸೂಚನೆಯೂ ಅದ್ಭುತಗಳನ್ನು ಪಡೆಯುವಲ್ಲಿ ನಂಬಿಕೆ ಇಲ್ಲ ಎಂದು ಇಲ್ಲಿರುವ ಪ್ರತಿಯೊಂದೂ ಸೂಚಿಸುತ್ತವೆ ದೋರ್ಕಳು ಎಂಥ ನಂಬಿಕೆಯನ್ನು ಹೊಂದಿದ್ದಳು (ಅಪೊಸ್ತಲರ ಕೃತ್ಯಗಳು 9)? [22]ಈ ಸಂಧರ್ಬದಲ್ಲಿ ಪೇತ್ರನ ಭರವಸೆಯು ಸೂಚಿಸುವುದೇನೆಂದರೆ ಇದು ಅಪೊಸ್ತಲರ ಕ್ರಿಸ್ತನ ಹೆಸರಿನಲ್ಲಿ ವಾಸಿಮಾಡಿರುವದು ಇದೆ ಮೊದಲನೆಯ ಬಾರಿಯಲ್ಲ ಆದರೆ ಕೇವಲ ದಾಖಲಾದ ಮೊದಲ ಪ್ರಕರಣವಾಗಿದೆ. [23]ಏಳು ಯೆಹೂದಿ ಮಂತ್ರವಾದಿಗಳು ಇದನ್ನು ಯೋಚಿಸುವ ತಪ್ಪನ್ನು ಮಾಡಿದರು ಮತ್ತು ರಸ್ತೆಯಲ್ಲಿ ಬೆತ್ತಲೆಯಾಗಿ ಓಡುವುದರ ಮುಲಕ ಕೊನೆಗೊಳಿಸಿದರು (19:13-16). [24]ಬಹುಶ ಯೇಸುಕ್ರಿಸ್ತನು ದೇವಾಲಯದಲ್ಲಿ ಇದ್ದಂತಹ ಅವಿಸ್ಮರಣೀಯ ದಿನಗಳಲ್ಲಿ ಪರಿಚಾಶತ್ತಮ ಘಟನೆಯನ್ನು ಹೊರತುಪಡಿಸಿ ಈತನೂ ಕೂಡಾ ದೇವಾಲಯದಲ್ಲಿ ಇದ್ದಿರಲ್ಲಿಕ್ಕೆ ಸಾಕು. [25]ವೈದ್ಯನಾದ ಲೂಕನು ವೈದ್ಯಕೀಯ ವಿವರಣೆಗಳನ್ನು ನಮಗೆ ಕೊಡುತ್ತಾನೆ. [26]NIVಆವೃತ್ತಿಯಲ್ಲಿ "ಆತನು ತನ್ನ ಪಾದಗಳಿಂದ ಜಿಗಿದನು" ಎಂದಿದೆ. [27]ಪ್ಸ್ಯೂಕೇ (psuche) "ಆತ್ಮ"ಈ ಪದಕ್ಕಿರುವ ಸಾಮಾನ್ಯವಾದ ಗ್ರೀಕ್ ಪದವಾಗಿದೆ. ಆದರೆ ಈ ಪದವು "ಮನಶಾಸ್ತ್ರದಲ್ಲಿ" (ಮನಸ್ಸಿನ ಅಧ್ಯಯನಕ್ಕೆ) ಬಳಸಲಾದಂತಹ ಪದವಾಗಿದೆ. ಮನಸ್ಸನ್ನು ಕುರಿತು ಉಪಯೋಗಿಸಲ್ಪಡುವುದಾಗಿದೆ. [28]ಕೆಲ ಹೇಳಿಕೆ ಯಲ್ಲಿ ಸೂಚಿಸುವುದೇನೆಂದರೆ ಹೊಸ ಒಡಂಬಡಿಕೆ ಸಮಯದಲ್ಲಿ ಇದ್ದಹಾಗೆ ದೇವರು ಅಷ್ಟೊಂದು ಶಕ್ತಿಶಾಲಿಯಾಗಿಲ್ಲ ಅಥವಾ ಈ ದಿನ ಹೊಸ ಒಡಂಬಡಿಕೆಯ ಸಮಯದಲ್ಲಿ ಇರುವಂತಹ ಮಹತ್ವವಾದ ಕೆಲವನ್ನು ನಾವು ಕಳೆದುಕೊಂಡಿದ್ದೇವೆ. ಆದಿಕ್ರೈಸ್ತರ ಪ್ರತಿನಿತ್ಯದ ಜೀವಿತದಲ್ಲಿ ಅದ್ಭುತಗಳ ಮಹತ್ವಗಳನ್ನು ಒತ್ತಿಹೇಳಲ್ಪಟ್ಟಿದೆ. ಅದ್ಭುತಗಳನ್ನು ಮಾಡುವ ಸಾಮರ್ಥ್ಯವು ಅವರನ್ನು ಒಳ್ಳೆಯ ಜನರನ್ನಾಗಿ ಮಾಡುವುದಿಲ್ಲ ಅಥವಾ ಅವರನ್ನು ಸ್ವರ್ಗಕ್ಕೆ ಹೊಗಲು ಸಿದ್ಧರನ್ನಾಗಿ ಮಾಡುವುದಿಲ್ಲ (ನೋಡಿರಿ 1 ಕೊರಿಂಥ ಪತ್ರ). ಅದಲ್ಲದೆ ಬೌತಿಕ ಆರೋಗ್ಯದ ಮಹತ್ವವು ಅತಿಯಾಗಿ ಹೇಳಲ್ಪಟ್ಟಿದೆ. ನಮ್ಮಲ್ಲಿ ಯಾರೂ ಅನಾರೋಗ್ಯವನ್ನು ಆರಿಸುವುದಿಲ್ಲ, ಆದರೆ ಅಸ್ವಸ್ಥತೆಯಲ್ಲಿ ಮೌಲ್ಯವಿದೆ (ಕೀರ್ತನೆ 119:71). ನಮಗೆ ಸದಾ ಅವಶ್ಯವಿರುವದು ಆತ್ಮೀಕ ಆರೋಗ್ಯವೇ ಹೊರತು ದೈಹಿಕ ಆರೋ ಗ್ಯವಲ್ಲ. ಅದ್ದರಿಂದ ಯಾವುದು ಮಹತ್ವದ್ದಾಗಿದೆ ಎಂದು ನೆನಪಿಟ್ಟುಕೊಳ್ಳಬೇಕು. ಇಂದು ನಾವು ಕ್ರೈಸ್ತತ್ವದಲ್ಲಿ ಪ್ರತಿಯೊಂದೂ ಶ್ವಾಶ್ವತ ಮೌಲ್ಯವನ್ನು ನಾವು ಕಂಡುಕೊಳ್ಳುತ್ತೇವೆ. [29]NIVಯಲ್ಲಿ "ಅವರು ಆತನನ್ನು ಗುರುತಿಸಿದರು" ಎಂದಿದೆ. [30]4:1-4ರಲ್ಲಿ ನಾವು ನೋಡುವಂತೆ ಈ ಸುದ್ದಿಯು ಯೆಹೂದಿ ನಾಯಕರಿಗೂ ಹರಡಿತು.

[31]ಪ್ರತಿಯೊಂದೂ ಘಟನೆಗಳು ಸರಿಯಾಗಿ ಎಲ್ಲಿನಡೆದವು ಮತ್ತು ಘಟನೆಗಳು ಸರಣಿಯು ಏನಾಗಿತ್ತು ಎಂದು ಲೂಕನು ನಮಗೆ ಸರಿಯಾಗಿ ಹೇಳಿಲ್ಲ. ಆದ್ದರಿಂದ ನಾನು ಕೊಡುವದು ಈ ದೃಷ್ಯಾವಳಿಗಳು ಕೇವಲ ಸಂಭವನೀಯ ವಿವರಗಲ್ಲಾಗಿವೆಯಷ್ಟೇ. [32]ಪಾಶ್ಚಾತ್ಯ ವೇದಭಾಗವು ಈ ಭಾಗವನ್ನು ಓದಲು ವಿಸ್ತರಿಸುತ್ತದೆ, "ಪೇತ್ರ ಮತ್ತು ಯೋಹಾನರು ಹೊರಗೆ ಬರುತ್ತಿರುವಂತೆ, ಆತನು ಅವರೊಡನೆ ಹೊರಬಂದು. ಅವರನ್ನು ಹಿಡಿದುಕೊಂಡಿದ್ದನು," ನಾನು ಚಿತ್ರಿಸಿಕೊಂಡಂತೆ, ಭಿಕ್ಷುಕನು ಅಪೊಸ್ತಲರೊಡನೆ ಹತ್ತಿರವಾಗಿದ್ದನು. ಇದರ ಮೂಲಕ ಆತನು ಇತರರಿಗೆ ಅವರು ತನಗೇನು ಮಾಡಿದರು ಎಂಬುದನ್ನು ಹೇಳಿದನು - ಇನ್ನೊಂದು ಮಾತಿನಲ್ಲಿ ಕೃತಜ್ಞತಾಪೂರ್ವಕವಾಗಿ ಎಂದು. ಕೆಲವರು ಸೂಚಿಸುವುದೇನೆಂದರೆ ಅಲ್ಲಿ ಬಹುಶ ಮೂಢನಂಬಿಕೆಯ ಸ್ಪರ್ಷವೂ ಇರಬಹುದು. ಒಂದು ವೇಳೆ ಅವರು ಅಲ್ಲಿಂದ ಹೊರಟು ಹೋದ ರೆ ತಾನು ತನ್ನ ಮುಂಚಿನ ಸ್ಥಿತಿಗೆ ಹಿಂತಿರುಗಬಹುದೆಂಬ ಭಯವು ಆತನಲ್ಲಿ ಇತ್ತು. ಅಂತೆಯೇ ಆತನು ಭಯಪಟ್ಟನು. ಹೀಗೆ ಆತನು ದೇವರಿಗೆ ಸ್ತೋತ್ರ ಸಲ್ಲಿಸಿದನು ಆದರೆ ಅವರಿಗಲ್ಲ, ಇದು ಅಸಾಧ್ಯವಾದುದು. [33]ಲೂಕನು ಇದನ್ನು "ಸೊಲೊಮೋನನ ಪಂಟಪ ಎಂದು ಕರೆಯಿಸಿಕೊಳ್ಳುವ" ಎಂದು ಕರೆದಿ ದ್ದಾನೆ. ಯಾಕೆಂದರೆ ಸಂಪ್ರದಾಯವು ಹೇಳು ವುದೇನೆಂದರೆ ಈ ಭಾಗವು ಮೂಲತಹವಾಗಿ ಸೊಲೊಮೋನನ ದೇವಾಲಯದ ಭಾಗವಾಗಿತ್ತು ಎಂದು. ನೈಜವಾಗಿ ಇದಕ್ಕಾಗಿ ಯಾವ ಆಧಾರಗಳು ಇಲ್ಲ. ನಿಜವಾಗಿ ಇದು ಹಾಗೆ ಅಲ್ಲ ಎನ್ನುವುದಕ್ಕೆ ಹೆಚ್ಚಿನ ಆಧಾರಗಳಿವೆ. KJVಯು ಇದೇ "ಸೊಲೊಮೋನನ ಮಂಟಪ" ಎಂದು ಸೂಚಿಸುವದು; NIVಯು "ಸೊಲೊಮೋನನ ಕಂಬಗಳ ಸಾಲು" ಎಂದು ಸೂಚಿಸಿದೆ. [34]ಬಾರ್ಕಲೆನ ಭಾಷಾಂತರವು "ಅವರು ಸಂಪೂರ್ಣವಾಗಿ ಆಶ್ಚರ್ಯ ಸ್ಥಿತಿಯಲ್ಲಿ ಇದ್ದರು ಎಂದಿದೆ" (William Barclay, *The Acts of*

*the Apostles*, The Daily Study Bible Series, rev. ed. [Phildelphia, Pa.: Westminster Press, 1976], 33). [35]ಇದು ಅನ್ಯರ ಅಂಗಳಕ್ಕೆ ಎದುರಾಗಿರುವ ಪಾರ್ಶ್ವ ಭಾಗದ ತೆರದ ಭಾಗವಾಗಿತ್ತು. [36]ಹೊಸ ಒಡಂಬಡಿಕೆಯ ಸಮಯದಲ್ಲಿನ ಸ್ವಸ್ಥತೆಯ ಸಂದರ್ಭಗಳ ಮತ್ತು ಇಂದಿನ ಸ್ವಸ್ಥತೆಯ ಕೂಟಗಳು ಎಂದು ಕರೆಯಲ್ಪಡುವವುಗಳ ಮಧ್ಯ ಇರುವ ವ್ಯತ್ಯಸವೇನೆಂದರೆ ಮೊದಲ ಶತಮಾನದ ಅದ್ಭುತಗಳು ಜನರ ಲಕ್ಷ್ಯವನ್ನು ಸೆಳೆದುಕೊಳ್ಳಲು ಮತ್ತು ಅಪೊಸ್ತಲರು ಪ್ರಾಮಣಿಕರೆಂದು ಸ್ಥಾಪಿಸಲು ನಡೆಯುತ್ತಿದ್ದಿವು, ನಂತರ ಅಪೊಸ್ತಲರು ಪ್ರಸಂಗಿಸುತ್ತಿದ್ದರು. ಆದರೆ ಇಂದು ಸಾಮಾನ್ಯವಾಗಿ, ಪ್ರಸಂಗ ಭಾಗವು ಮೊದಲಿರುತ್ತದೆ ಇದರ ಮೂಲ ಉದ್ದೇಶವು ಜನರ ಭಾವನೆಯನ್ನು ಉದ್ರೇಕಿಸುವದು ಆಗಿದೆ; ನಂತರ ಅಲ್ಲಿ ಸ್ವಸ್ಥತಾ ಕಾರ್ಯವು ನಡೆಯುತ್ತವೆ. ಹೊಸ ಒಡಂಬಡಿಕೆಯ ಸಮಯದಲ್ಲಿ ಬೋಧನಾ ಭಾಗವು ಬಲು ಮಹತ್ವವಾಗಿತ್ತು. ಈ ದಿನ ಸ್ವಸ್ಥತೆಯ ಮಹತ್ವವಾಗಿದೆ.